ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಪುಟಗಳು : 36


ರೂ. 28/–

ಕನ್ನಡ–ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAAPU PRAPANCHA

ಸಂಪುಟ–05 • ಸಂಚಿಕೆ–09 • ಫೆಬ್ರವರಿ 2024



ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ–ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations**, Bangalore

ರೂ. 28/– **BAAPU PRAPANCHA**

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ–ಇಂಗ್ಲೀಷ್ ಮಾಸಿಕ ಸಂಪುಟ–05 • ಸಂಚಿಕೆ–09 • ಫೆಬ್ರವರಿ 2024

ಸರಳ ಜೀವನ ಮತ್ತು ಮೇಲ್ಮಟ್ಟದ ವಿಚಾರ
ಮನುಷ್ಯನನ್ನು ಮಹಾನ್ ವ್ಯಕ್ತಿಯನ್ನಾಗಿ ಮಾಡುತ್ತದೆ.

- ಗಾಂಧಿ

ಪತ್ರಗಳು

ಮಾನ್ಯರೆ,

ನಾಡೋಜ ಡಾ. ಜಿ. ಕೃಷ್ಣಪ್ಪನವರ ಗಾಂಧೀಜಿಯ ಜೀವನ ಮೌಲ್ಯಗಳು ಲೇಖನ ಗಾಂಧೀಜಿಯವರ ಜೀವನದ ಪ್ರಮುಖ ತಿರುವುಗಳನ್ನು ತೋರಿಸಿದೆ.ಸಂಕ್ಷಿಪ್ತವಾಗಿ ಗಾಂಧೀಜಿಯವರನ್ನು ಪರಿಚಯಿಸಿದ ಈ ಲೇಖನಕ್ಕಾಗಿ ಅವರಿಗೆ ಧನ್ಯವಾದಗಳು. ಹೀಗೆ ಗಾಂಧೀಜಿಯವರ ಬಗ್ಗೆ ಮಾಹಿತಿ ನೀಡುವ ಕಿರು ಲೇಖನಗಳನ್ನು ನಿರಂತರವಾಗಿ ಪ್ರಕಟಿಸಿ.

ಅವರ ಆಕಾಶವಾಣಿ ರೇಡಿಯೋ ಭಾಷಣದ ಲಿಂಕ್ ಇದ್ದರೆ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ.

– ಸ್ವಾಮಿ, ಬೆಂಗಳೂರು.

* * *

ಮಾನ್ಯರೆ,

" ಚಿತ್ರಾವಳಿ" ಗಾಂಧಿ ಭವನ ಮತ್ತು ಗಾಂಧಿ ಪ್ರಣೀತ ಸಂಘ ಸಂಸ್ಥೆಗಳ ಚಟುವಟಿಕೆಗಳ ಚಿತ್ರಣ ನೀಡುವ ಅಂಕಣದಲ್ಲಿ ಫೋಟೋ ಕೆಳಗಡೆ ಆ ಫೋಟೋ ಸಂದರ್ಭದ ಕಿರು ಮಾಹಿತಿಯನ್ನು ಕಡ್ಡಾಯವಾಗಿ ಪ್ರಕಟಿಸಿ . ಸಾಧ್ಯವಾದರೆ ಹೆಚ್ಚು ಪುಟಗಳನ್ನು ಚಿತ್ರಾವಳಿಗಾಗಿ ಮೀಸಲಿಡಿ .

– ಪ್ರಶಾಂತ್ ಕುಮಾರ್, ಮಾಗಡಿ


* * *

ಮಾನ್ಯರೆ,

ಮಹಾತ್ಮ ಗಾಂಧಿಯವರ ಅಂತಿಮ ಯಾತ್ರೆ ಫೋಟೋಗಳು ಅವರ ಜನಪ್ರಿಯತೆ ಮತ್ತು ಮಹತ್ವವನ್ನು ಬಿಂಬಿಸುತ್ತವೆ. ಅವರ ಅಂತಿಮ ಯಾತ್ರೆಯಲ್ಲಿ ಭಾಗವಹಿಸಿದ್ದ ಗಣ್ಯಾತಿ ಗಣ್ಯರು ನೆಲದಲ್ಲಿ ಕುಳಿತು ಗೌರವ ಸಲ್ಲಿಸಿದ್ದು ಗಾಂಧೀಜಿಯವರ ಮೇರು ವ್ಯಕ್ತಿತ್ವಕ್ಕೆ ಸಂದ ಗೌರವವಾಗಿದೆ.

ವಿಶ್ವ ಸಂಸ್ಥೆಯ ಕಚೇರಿಯಲ್ಲಿ ವಿಶ್ವ ಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳ ಧ್ವಜವನ್ನು ಅರ್ಧಕ್ಕೆ ಇಳಿಸಿದ್ದಂತೂ ಐತಿಹಾಸಿಕ ಘಟನೆಯಾಗಿದೆ. ಗಾಂಧೀಜಿಗೆ ದೊರೆತ ಈ ಗೌರವಕ್ಕೆ ಭಾರತೀಯರಾದ ನಾವು ಹೆಮ್ಮೆ ಪಡ ಬೇಕು.

– ಕೃಷ್ಣೇಗೌಡ, ಪಾಂಡವಪುರ



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು https://gandhibhavan.in ಜಾಲತಾಣದಲ್ಲಿ ವೀಕ್ಷಿಸಿ.

ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :

ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.




ಗಾಂಧೀಜಿ ಸಂವಾದಗಳು...

– **ರಾಜಾರಾಮ್ ತೋಳ್ಪಾಡಿ ಮತ್ತು ಬಿ.ನಿತ್ಯಾನಂದ ಶೆಟ್ಟಿ**

ಮಹಾತ್ಮ ಗಾಂಧಿಯವರು ಕಾಲದ ಯಾವುದೋ ಒಂದು ವಿಶಿಷ್ಟ ಗಳಿಗೆಯಲ್ಲಿ ಧುತ್ ಎಂದು ಕಾಣಿಸಿಕೊಂಡ ಪ್ರವಾದಿಯಲ್ಲ. ಅವರು ನಮ್ಮ-ನಿಮ್ಮೆಲ್ಲರಂತೆ ಈ ದೇಶದ ಒಂದು ಊರಿನ ಕುಟುಂಬವೊಂದರಲ್ಲಿ ಹುಟ್ಟಿ ಬಂದವರು. ನಮ್ಮಂತೆಯೇ ಕಷ್ಟ-ಕಾರ್ಪಣ್ಯಗಳ ನಡುವೆ ಶಿಕ್ಷಣ ಪಡೆದು ತನ್ನ ವೃತ್ತಿಜೀವನದಲ್ಲಿ ಯಶಸ್ಸಿಗಾಗಿ ತಡಕಾಡಿದವರು ಮತ್ತು ತಾನು ಬದುಕಿದ ಕಾಲಘಟ್ಟದಲ್ಲಿ ತನ್ನ ಅಸ್ತಿತ್ವಕ್ಕಾಗಿ ಹೋರಾಡಿದವರು. ಈ ಹೋರಾಟವನ್ನು ಅವರು ಹೊರಗಿನ ಬಾಹ್ಯ ಪ್ರಪಂಚದಲ್ಲಷ್ಟೇ ನಡೆಸಲಿಲ್ಲ ತನ್ನೊಳಗೂ ನಡೆಸಿದರು. ಆ ಒಳ-ಹೊರಗಿನ ಹೋರಾಟದ ಮೂಲಕ ತಮಗೇ ವಿಶಿಷ್ಟವಾದ ಅಸ್ಮಿತೆಯನ್ನು ಪಡೆದವರು ಗಾಂಧಿ. ಗುಜರಾತಿನ ಕರಾವಳಿ ಪ್ರದೇಶದ ಊರೊಂದರಲ್ಲಿ ಜನಿಸಿ, ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ತೆರಳಿ, ತನ್ನ ವೃತ್ತಿಯ ಕಾರಣಕ್ಕಾಗಿ ದಕ್ಷಿಣ ಆಫ್ರಿಕಾದಲ್ಲಿ ನೆಲೆ ನಿಂತು, ಕಾಲಕ್ರಮದಲ್ಲಿ ಮತ್ತೆ ಭಾರತಕ್ಕೆ ಹಿಂದಿರುಗಿದರು ಎನ್ನುವುದು ಅವರ ಬದುಕಿನ ಒಂದು ಹೊರನೋಟದ ಕೆಲವು ವಿವರ ಅಷ್ಟೇ.

ಗಾಂಧೀಜಿ ತನ್ನ ಬದುಕಿನ ಹೊರನೋಟದ ಆಚೆ ನಮ್ಮ-ನಿಮ್ಮಂತಹ ಜನಸಾಮಾನ್ಯನೊಬ್ಬ ಪ್ರಖರವಾದ ಸತ್ಯಶೋಧಕನಾಗಿ, ಸತ್ಯಾಗ್ರಹಿಯಾಗಿ, ವಿಶಿಷ್ಟ ಚಿಂತನೆಗಳ ಧೀಮಂತನಾಗಿ ರೂಪುಗೊಂಡ ಕಥೆ ಬಹಳ ಆಳವಾದುದು ಮತ್ತು ಸಂಕೀರ್ಣವಾದುದು. ಸರ್ವೇಸಾಮಾನ್ಯನಾದ ವ್ಯಕ್ತಿಯೊಬ್ಬ ತನ್ನ ಬಾಳ್ವೆಯ ಮೂಲಕವೇ ಬೆಳಕು ಕಾಣುತ್ತ ಮಹಾತ್ಮನಾಗಿ ರೂಪುಗೊಂಡದ್ದು ನಿಜಕ್ಕೂ ಒಂದು ಬಗೆಯ ವಿದ್ಯಮಾನವೇ ಸರಿ. ಹಾಗಾಗಿ ಮಹಾತ್ಮ ಗಾಂಧಿ ಎಂಬುದು ವ್ಯಕ್ತಿಯೊಬ್ಬನ ಹೆಸರಲ್ಲ, ವಿದ್ಯಮಾನವೊಂದರ ಹೆಸರು. ಈ ಪ್ರಕ್ರಿಯೆಯ ಕೆಲವು ಮುಖ್ಯ ಎಳೆಗಳನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗುವುದು.

ಗಾಂಧಿಯವರ ಕ್ರಿಯಾಶೀಲವಾದ ಬದುಕಿನಲ್ಲಿ ಆಳವಾಗಿ ನಿಹಿತವಾಗಿರುವ ಪ್ರಜಾತಾಂತ್ರಿಕ ನಡೆಯನ್ನು ನಾವು 'ಸಂಭಾಷಣೆ'ಎಂದು ಕರೆಯಲಿಚ್ಛಿಸುತ್ತೇವೆ. ಇಂಗ್ಲೆಂಡಿನ ತನ್ನ ಶೈಕ್ಷಣಿಕ ಜೀವನದಿಂದ



ಆರಂಭಗೊಂಡು ಬದುಕಿನ ಕೊನೆಯ ಉಸಿರಿನ ತನಕವೂ ಮಹಾತ್ಮ ನಡೆಸಿದ್ದು ನಿರಂತರವಾದ ಹಾಗೂ ಸುದೀರ್ಘವಾದ ಸಂಭಾಷಣೆ. ಈ ಸಂಭಾಷಣೆಯನ್ನು ಅವರು ಕೆಲವೊಮ್ಮೆ ತಮ್ಮೊಳಗೇ ನಡೆಸಿದರು ಮತ್ತು ಕೆಲವೊಮ್ಮೆ ತನ್ನ ಸಂಗಡಿಗರ ಜೊತೆ ಹಾಗೂ ತನ್ನನ್ನು ವಿರೋಧಿಸಿದವರ ಜೊತೆಗೂ ನಡೆಸಿದರು. ಬಹುಮುಖ್ಯವಾದ ಸಂಗತಿಯೆಂದರೆ ಗಾಂಧೀಜಿಯವರಿಗೆ ಸಂಭಾಷಣೆಯೆಂದರೆ ಪ್ರತಿಸ್ಪರ್ಧಿಗಳ ಜೊತೆಗೆ ನಡೆಸುವ ವಾಗ್ಯುದ್ಧವಲ್ಲ. ಅದರಲ್ಲಿ ಅವರಿಗೆ ನಂಬಿಕೆಯೂ ಇರಲಿಲ್ಲ. ಸಂಭಾಷಣೆಯೆಂದರೆ ಗಾಂಧಿಯವರಿಗೆ ತಾನು ನಂಬಿದ ಸತ್ಯವನ್ನು ಇನ್ನೊಬ್ಬರ ಮೇಲೆ ಹೇರುವುದೂ ಆಗಿರಲಿಲ್ಲ. ಅದು ಅವರಿಗೆ ತಾನು ಕಂಡ ಸತ್ಯವನ್ನು ಪ್ರಯೋಗಕ್ಕೆ ಒಡ್ಡುವ, ತಾನು ನಂಬಿದನ್ನು ತಾನೇ ಪರೀಕ್ಷಿಸುವ, ವಿಸ್ತರಿಸುವ ಹಾಗೂ ಸಂದರ್ಭ ಬಂದರೆ ರೂಪಾಂತರಿಸಿಕೊಳ್ಳುವ ಕ್ರಿಯೆಯೂ ಆಗಿತ್ತು.

ಗಾಂಧಿ ತನ್ನ ಜೀವಮಾನದುದ್ದಕ್ಕೂ ನಡೆಸಿದ ಅನೇಕಾನೇಕ ಸಂಭಾಷಣೆಗಳು ಸತ್ಯವನ್ನು ಅರಿಯುವ ಅವರ ಪ್ರಯೋಗದ ಭಾಗ. ಅವರ ಸತ್ಯದ ಈ ಪ್ರಯೋಗದಲ್ಲಿ ಅವರಿಗೆ ಯಾರೂ ಅನ್ಯರಲ್ಲ, ಪ್ರತಿಸ್ಪರ್ಧಿಗಳಲ್ಲ, ವೈರಿಗಳಂತೂ ಅಲ್ಲವೇ ಅಲ್ಲ. ಹಾಗಾಗಿ ಸೋಲು-ಗೆಲುವು ಅವರಿಗೆ ಮುಖ್ಯವಲ್ಲ. ಸಂಭಾಷಣೆಯನ್ನು ಭಾಷಣ ಎಂದು ತಿಳಿಯದೆ, ಅದನ್ನೂ ತನ್ನ ಅಧ್ಯಯನ ಎಂದೇ ಪರಿಭಾವಿಸಿದ ಗಾಂಧಿಯವರು ತಾನು ಕಂಡುಕೊಂಡ ಸತ್ಯವನ್ನೇ ಅಂತಿಮ ಸತ್ಯವೆನ್ನುವ ಹಠಮಾರಿತನದ ನಿಲುವು ಹೊಂದಿರುವುದನ್ನೂ ಹಿಂಸೆ ಎಂದು ತಿಳಿದಿದ್ದರು. ಹಾಗೆಯೇ ತನ್ನ ಮುಂದೆ ಇರುವವರನ್ನು ಪ್ರಖರ ವಾದದ ಮೂಲಕ, ತರ್ಕಬದ್ಧ ವಾಗ್ಬಾಣಗಳಿಂದ ಸದೆಬಡಿಯುವುದನ್ನು ಕೂಡ ಅವರು ಹಿಂಸೆಯ ಇನ್ನೊಂದು ರೂಪವೆಂದೇ ತಿಳಿದಿದ್ದರು. ಹೆಚ್ಚೂಕಡಿಮೆ ಈ ಅರ್ಥದ ಮಾತನ್ನು ಧ್ವನಿಸಿದವರು ಸುಪ್ರಸಿದ್ಧ ಗಾಂಧಿ ಚಿಂತಕ ಅಕೀಲ್ ಬಿಲ್ಗ್ರಾಮಿ.

ಭಾರತದ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಗಾಂಧಿಯವರು ಅನೇಕರೊಂದಿಗೆ ಮಹತ್ವದ ಸಂಭಾಷಣೆಗಳನ್ನು ನಡೆಸಿದ್ದಾರೆ. ಅವುಗಳಲ್ಲಿ ಸಾಂಸ್ಕೃತಿಕ ಹಾಗೂ ರಾಜಕೀಯ ಮಹತ್ವದ ದೃಷ್ಟಿಯಿಂದ ಮೂರು ಸಂಭಾಷಣೆಗಳು ಬಹುಮುಖ್ಯವೆಂದು ನಾವು ಭಾವಿಸಿದ್ದೇವೆ. ಗಾಂಧೀಜಿಯವರ ನೈತಿಕ-ರಾಜಕೀಯ ಚಿಂತನೆಯ ಮಜಲುಗಳನ್ನು ತೋರಿಸಿಕೊಡುತ್ತವೆ ಎನ್ನುವ ಕಾರಣಕ್ಕಾಗಿಯೂ ಈ ಮೂರು ಸಂಭಾಷಣೆಗಳು ನಮಗೆ ಮುಖ್ಯ ಎಂದನ್ನಿಸಿವೆ.

ರವೀಂದ್ರನಾಥ್ ಟಾಗೋರ್– ಗಾಂಧಿ ಸಂವಾದ: ಸ್ವದೇಶಿ ಆಂದೋಲನದ ಸಂದರ್ಭದಲ್ಲಿ ಕವಿ, ತತ್ವಜ್ಞಾನಿ ಗುರುದೇವ ರವೀಂದ್ರನಾಥ್ ಟಾಗೋರ್ ಜೊತೆಗೆ ಗಾಂಧಿಯವರು ನಡೆಸಿದ ಸಂವಾದ. ಎರಡನೆಯದು, ವೈಕಂ ಸತ್ಯಾಗ್ರಹದ ಸನ್ನಿವೇಶದಲ್ಲಿ ಕೇರಳದಲ್ಲಿ ತಿರುವಾಂಕೂರು ಪಂಡಿತರ ಜೊತೆಗೆ ಅಸ್ಪೃಶ್ಯತೆಯ ಶಾಸ್ತ್ರ ಸಮ್ಮತಿಗೆ ಸಂಬಂಧಿಸಿದಂತೆ ಗಾಂಧಿಯವರು ನಡೆಸಿದ ಸಂವಾದ. ಮೂರನೆಯದು, ದಲಿತರು ಪ್ರತ್ಯೇಕ ಚುನಾವಣ ಕ್ಷೇತ್ರಗಳನ್ನು (Separate Electorate) ಹೊಂದುವ ಬಗ್ಗೆ ಬಾಬಾ ಸಾಹೇಬ್ ಡಾ. ಬಿ ಆರ್ ಅಂಬೇಡ್ಕರ್ ಜೊತೆಗೆ ಮಹಾತ್ಮರು ನಡೆಸಿದ ಸಂವಾದ. ಈ ಮೂರು ಸಂವಾದಗಳಲ್ಲಿ ಗಾಂಧೀಜಿಯವರು ನಡೆಸಿದ ಸಂಭಾಷಣೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ಹಾಗೂ ಅವರ ಚಿಂತನೆಯ ಮಜಲುಗಳನ್ನು ಅರಿಯುವ ಪ್ರಯತ್ನ ನಡೆಸುತ್ತೇವೆ.

ಸ್ವದೇಶೀ ಆಂದೋಲನದ ಸಂದರ್ಭದಲ್ಲಿ ವಿದೇಶೀ ವಸ್ತು ಮತ್ತು ವಸ್ತ್ರಗಳನ್ನು ಬಹಿಷ್ಕರಿಸುವ ಸಂದರ್ಭದಲ್ಲಿ ಗಾಂಧೀಜಿಯವರು ತೆಗೆದುಕೊಂಡ ನಿಲುವು ಟಾಗೋರರನ್ನು ಕಸಿವಿಸಿಗೆ ಈಡು ಮಾಡಿತ್ತು. ಟಾಗೋರರ ಪ್ರಕಾರ ವಿದೇಶೀ ವಸ್ತ್ರಗಳನ್ನು ಬಹಿಷ್ಕರಿಸುವ ನೀತಿ ಸರಿಯಾದುದೇ ಹೌದು. ಆದರೆ ಆ ವಸ್ತ್ರಗಳನ್ನು ಸುಡಬೇಕೆನ್ನುವ ಗಾಂಧಿಯವರ ನಿಲುವನ್ನು ಅವರು ವಿರೋಧಿಸಿದರು. ತಾವು ಉಪಯೋಗಿಸಲು ನಿರಾಕರಿಸುವ ವಸ್ತ್ರಗಳನ್ನು ಬಟ್ಟೆಬರೆಯೇ ಇಲ್ಲದ ಬಡವರಿಗೆ ನೀಡಬೇಕೆನ್ನುವುದು ಟಾಗೋರ್ ಅವರ ವಾದವಾಗಿತ್ತು. ಗಾಂಧಿಯವರು ಅರ್ಥಶಾಸ್ತ್ರ ಮತ್ತು

ನೀತಿಶಾಸ್ತ್ರಗಳ ನಡುವೆ ಸ್ಪಷ್ಟವಾದ ವ್ಯತ್ಯಾಸವನ್ನು ಗುರುತಿಸಲು ಅಶಕ್ತರಾಗಿದ್ದರೆಂದೇ ಟಾಗೋರರು ತಿಳಿದಿದ್ದರು. ಇದಕ್ಕೆ ಪ್ರತಿಯಾಗಿ ಗಾಂಧಿಯವರು ತನಗೆ ನೈತಿಕವಾಗಿ ತ್ಯಾಜ್ಯವಾದದ್ದನ್ನು ಇನ್ನೊಬ್ಬರಿಗೆ ನೀಡುವುದು ಅನೈತಿಕವೆಂದು, ತನ್ನ ಮಟ್ಟಿಗೆ ಅರ್ಥಶಾಸ್ತ್ರ ಮತ್ತು ನೀತಿಶಾಸ್ತ್ರಗಳು ಮಾನವ ಜೀವನದ ಎರಡು ಅವಿಭಾಜ್ಯ ಭಾಗಗಳೆಂದು ವಾದಿಸಿದರು.

ಸಂಕ್ಷಿಪ್ತವಾಗಿ ನಿರೂಪಿಸಿದ ಗಾಂಧಿ–ಟಾಗೋರ್ ಸಂವಾದದ ಈ ಸಣ್ಣತುಣುಕು ಗಾಂಧೀಜಿಯವರ ರಾಜಕೀಯ ಚಿಂತನೆಯ ಒಂದು ಮಹತ್ವದ ಆಯಾಮವನ್ನು ಮತ್ತು ಬದುಕಿನ ಕುರಿತಾಗಿ ಅವರಿಗಿರುವ ಅವಿಚ್ಛಿನ್ನ ನೋಟವನ್ನು ಪ್ರತಿಬಿಂಬಿಸುತ್ತದೆ. ಗಾಂಧೀಜಿ ತನ್ನ ಬದುಕಿನುದ್ದಕ್ಕೂ ಜಗತ್ತನ್ನು ಪ್ರತ್ಯ–ಪ್ರತ್ಯೇಕವಾಗಿ, ವರ್ಗೀಕರಿಸಿ ನೋಡುವುದರಲ್ಲಿ ವಿಶ್ವಾಸವಿರಿಸಿಕೊಂಡವರಲ್ಲ. ಧರ್ಮ, ರಾಜಕಾರಣ, ಅರ್ಥಶಾಸ್ತ್ರ, ನೀತಿಶಾಸ್ತ್ರ, ಖಾಸಗಿ, ಸಾರ್ವಜನಿಕ ಮೊದಲಾದ ಪ್ರತ್ಯೇಕತೆಗಳನ್ನು ಸಹಜ ಮತ್ತು ಅನಿವಾರ್ಯ ಎಂದು ತಿಳಿದುಕೊಳ್ಳುವ ಈ ನಮ್ಮ ಕಾಲದಲ್ಲಿ ಗಾಂಧೀಜಿ ಸಮಗ್ರತೆಯ ಅಥವಾ ಅವಿಚ್ಛಿನ್ನತೆಯ ಒಂದು ವಿಶ್ವನೋಟವನ್ನು ನಮ್ಮ ಮುಂದಿರಿಸಿದ್ದಾರೆ.

ತಿರುವಾಂಕೂರಿನ ಸಂಸ್ಕೃತ ವಿದ್ವಾಂಸರ ಜೊತೆ ಗಾಂಧಿ ಸಂವಾದ: ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಗಾಂಧೀಜಿ ನಡೆಸಿದ ಇನ್ನೊಂದು ಸಂವಾದ ಅಸ್ಪೃಶ್ಯತೆಯ ಧರ್ಮಶಾಸ್ತ್ರೀಯ ಮಾನ್ಯತೆಗೆ ಸಂಬಂಧಿಸಿದ್ದು. ಗಾಂಧಿ ಶಾಸ್ತ್ರಾರ್ಥಗಳನ್ನು ವ್ಯಾಖ್ಯಾನಿಸಿ ಅರ್ಥನಿರೂಪಣೆ ಮಾಡುವ ಘನಪಾಠಿಗಳೇನೂ ಅಲ್ಲ. ಹಾಗಿದ್ದರೂ ಅವರು ತಿರುವಾಂಕೂರಿನ ಸಂಸ್ಕೃತದ ಘನ ವಿದ್ವಾಂಸರ ಜೊತೆಗೆ ಧರ್ಮಶಾಸ್ತ್ರಗಳು ಹೇಳುವುದೇನು ಎಂಬುದನ್ನು ಚರ್ಚಿಸುವ, ಸಮಸ್ಯಾತ್ಮಕಗೊಳಿಸುವ ದುಸ್ಸಾಹಸವನ್ನು ನಡೆಸಿದರು. ಗಾಂಧೀಜಿಯವರ ಪ್ರಕಾರ ಧರ್ಮಶಾಸ್ತ್ರಗಳು ಅಸ್ಪೃಶ್ಯತೆಯನ್ನು ಮಾನ್ಯ ಮಾಡುವುದಿಲ್ಲ. ಓರ್ವ ನಿಷ್ಠಾವಂತ ಹಿಂದೂವಾಗಿ ತನಗೆ ಧರ್ಮಶಾಸ್ತ್ರವನ್ನು ಓದುವ, ಅರ್ಥ ಮಾಡಿಕೊಳ್ಳುವ ಹಾಗೂ ಅದಕ್ಕನುಸಾರವಾಗಿ ನಡೆದುಕೊಳ್ಳುವ ಅಧಿಕಾರ ಅಥವಾ ಸ್ವಾತಂತ್ರ್ಯ ಇದೆ ಎನ್ನುವುದು ಗಾಂಧೀಜಿಯವರ ಖಚಿತವಾದ ನಿಲುವಾಗಿತ್ತು. ಅಷ್ಟು



ಮಾತ್ರವಲ್ಲದೆ, ಧರ್ಮವನ್ನು ಯುಗಧರ್ಮವೆಂದು ವ್ಯಾಖ್ಯಾನಿಸುವ ಅವರು, ಕಾಲಕ್ಕನುಗುಣವಾಗಿ ಪರಿವರ್ತನಶೀಲವಾಗುವುದೇ ಧರ್ಮಕ್ಕಿರಬೇಕಾದ ಚಲನಶೀಲತೆ ಎಂದು ನಂಬಿದ್ದರು.

ಗಾಂಧೀಜಿಯವರ ಈ ವಾದವನ್ನು ಖಡಾಖಂಡಿತವಾಗಿ ತಿರಸ್ಕರಿಸಿದ ಪಂಡಿತರು ಬ್ರಾಹ್ಮಣನಲ್ಲದ ಗಾಂಧಿಗೆ ಧರ್ಮಶಾಸ್ತ್ರವನ್ನು ವ್ಯಾಖ್ಯಾನಿಸುವ ಅಧಿಕಾರವಾಗಲಿ ಅಥವಾ ಸಾಮರ್ಥ್ಯವಾಗಲಿ ಇಲ್ಲ ಎಂದು ಘೋಷಿಸಿದರು. ಅಲ್ಲದೆ, ಅಸ್ಪೃಶ್ಯತೆಯನ್ನು ಧಾರ್ಮಿಕವೆಂದೂ, ಶಾಸ್ತ್ರಬದ್ಧವೆಂದೂ ಪ್ರತಿವಾದಿಸಿದರು. ತಿರುವಾಂಕೂರು ಪಂಡಿತರ ಜೊತೆಗಿನ ಈ ಸಂವಾದದಲ್ಲಿ ಗಾಂಧೀಜಿ ಪರಾಜಿತರಾದರು. ಆದರೆ ಈ ಸೋಲು ಅವರನ್ನು ಧೃತಿಗೆಡಿಸಲಿಲ್ಲ. ಮಾತ್ರವಲ್ಲ ಈ ಸೋಲಿನ ಬೆಳಕಿನಲ್ಲಿ ಧರ್ಮ ಮತ್ತು ದೇವರ ಕುರಿತು ಹೊಸ ನಿರೂಪಣೆಯನ್ನು ಅವರು ನೀಡಿದರು. ನಾನು ಇಲ್ಲಿಯ ತನಕ ದೇವರೇ ಸತ್ಯವೆಂದು ತಿಳಿದಿದ್ದೆ. ಆದರೆ ಇನ್ನು ಮುಂದೆ ಸತ್ಯವೇ ದೇವರು ಎಂದು ಭಾವಿಸುತ್ತೇನೆ– ಎನ್ನುವ ಧರ್ಮದ ಕುರಿತಾದ ಅವರ ಈ ಹೊಸ ನಿರ್ವಚನ ಮಾರ್ಮಿಕವಾದದ್ದು ಮಾತ್ರವಲ್ಲ, ಕ್ರಾಂತಿಕಾರಕವಾದುದೂ ಹೌದು. ಗಾಂಧಿಯವರ ಕುರಿತು ಚಿಂತನೆ ನಡೆಸಿದ ಅನೇಕ ವಿದ್ವಾಂಸರು 'ಗಾಂಧೀಚಿಂತನೆ'ಯಲ್ಲಿ ಸಂಭವಿಸಿದ ಈ ಪಲ್ಲಟವನ್ನು ಜ್ಞಾನಮೀಮಾಂಸೆಯ ಪಲ್ಲಟ (Epistemological Shift) ಎಂದು ಗುರುತಿಸಿದ್ದಾರೆ.

ಡಾ. ಬಿ ಆರ್ ಅಂಬೇಡ್ಕರ್ –ಗಾಂಧಿ ಸಂವಾದ: ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಗಾಂಧಿಯವರು ನಡೆಸಿದ ಮೂರನೆಯ ಸಂವಾದ ಬಹು ಮುಖ್ಯವಾದದ್ದು ಮಾತ್ರವಲ್ಲ, ಚಾರಿತ್ರಿಕವಾಗಿ ಸ್ಮರಣೀಯವಾದದ್ದು ಕೂಡ. ಈ ದೇಶದ ಇನ್ನೋರ್ವ ಪ್ರಖರ ಚಿಂತಕ ಡಾ. ಬಿ ಆರ್ ಅಂಬೇಡ್ಕರ್ ಜೊತೆಗೆ ಗಾಂಧಿ ನಡೆಸಿದ ಈ ಸಂವಾದ ದಲಿತರು ಪ್ರತ್ಯೇಕವಾದ ಚುನಾವಣಾ ಕ್ಷೇತ್ರವನ್ನು ಹೊಂದುವ ಅಂಬೇಡ್ಕರರವರ ಪ್ರಸ್ತಾವಕ್ಕೆ ಸಂಬಂಧಿಸಿದ್ದು. ದಲಿತ ಅಸ್ಮಿತೆಯ ಪ್ರತಿಪಾದಕರೂ ಆಗಿದ್ದ ಅಂಬೇಡ್ಕರ್ ದಲಿತ ವಿಮೋಚನೆಗಾಗಿ ಪ್ರತ್ಯೇಕ ಚುನಾವಣಾ ಕ್ಷೇತ್ರ ನಿರ್ಣಾಯಕವೆಂದು ತಿಳಿದಿದ್ದರು. ದಲಿತರನ್ನು (ಗಾಂಧೀಜಿಯವರ ಪ್ರಕಾರ ಅವರು ಹರಿಜನರು) ಹಿಂದೂಧರ್ಮದ ಅವಿಭಾಜ್ಯ ಭಾಗವೆಂದು ಭಾವಿಸಿದ್ದ ಗಾಂಧೀಜಿ ಅಂಬೇಡ್ಕರ್ ಅವರ ಪ್ರಸ್ತಾವವನ್ನು



ವಿನಾಶಕಾರಿ ಎಂದು ವಿರೋಧಿಸಿದ್ದರು. ಈ ಸಂಬಂಧವಾಗಿ ಅವರ ನಡುವೆ ನಡೆದ ಸಂವಾದ ಗಹನವಾದುದು ಮಾತ್ರವಲ್ಲ ಅದು ಆಧುನಿಕ ಭಾರತದ ಸಾಂಸ್ಕೃತಿಕ ಚರಿತ್ರೆಯ ಒಂದು ಬಹುಮುಖ್ಯ ಅಂಶವೂ ಹೌದು.


ಗಾಂಧೀಜಿಯವರಿಗೆ ಅಂಬೇಡ್ಕರ್ ಅವರ ಜೊತೆಗಿನ ಮಾತುಕತೆ ಸಂವಾದವಾಗಿದ್ದರೆ ಅಂಬೇಡ್ಕರ್ ಅವರಿಗೆ ಅದು ಬಲುದೊಡ್ಡ ವಾಗ್ವಾದವಾಗಿತ್ತು. ಅಪ್ರತಿಮ ವಕೀಲರಾಗಿದ್ದ ಅಂಬೇಡ್ಕರ್ ಅವರಿಗೆ ಪ್ರಖರ ಮತ್ತು ತರ್ಕಬದ್ಧ ವಾದಸರಣಿಯ ಮೂಲಕ ತನ್ನ ಪ್ರತಿದ್ವಂದ್ವಿ ಎಂದು ಭಾವಿಸಿದ್ದ ಗಾಂಧೀಜಿಯವರನ್ನು ವಾದದಲ್ಲಿ ಹಿಮ್ಮೆಟ್ಟಿಸುವುದು ಬಹಳ ಮುಖ್ಯವಾಗಿತ್ತು. ತಾನು ಮಾಡಹೊರಟ ರಾಜಕೀಯಕ್ಕೆ ವಿರೋಧವಾಗಿರುವ ಅರ್ಥಾತ್ ತನ್ನ ರಾಜಕೀಯ ವಿರೋಧಿಯಾಗಿರುವ ಗಾಂಧಿಯವರನ್ನು ಮಣಿಸುವುದು ಅಂಬೇಡ್ಕರ್ ಅವರಿಗೆ ದಲಿತ ಸಮುದಾಯದ ರಾಜಕೀಯ ಅಸ್ತಿತ್ವವನ್ನು ಸ್ಥಾಪಿಸುವುದಕ್ಕಾಗಿ ಅನಿವಾರ್ಯವಾಗಿತ್ತು. ಗಾಂಧಿಯವರಿಗೆ, ಅಂಬೇಡ್ಕರ್ ಅವರು ತಾಳಿದ ನಿಲುವಿನ ಅಪಾಯಗಳನ್ನು ಮನಗಾಣಿಸಿಕೊಡುವುದು ಮತ್ತು ಅವರ ಮನ ಒಲಿಸುವುದು ಮುಖ್ಯವಾಗಿತ್ತು. ಅಂಬೇಡ್ಕರ್ ಅವರು ಸಾಕ್ಷಿಗಳನ್ನು ಅವಲಂಬಿಸಿದ್ದರು. ಗಾಂಧಿಯವರು ಅಂತಃಸ್ಸಾಕ್ಷಿಯನ್ನು ನಂಬಿದ್ದರು.

ವಿಭಿನ್ನ ದೃಷ್ಟಿಕೋನಗಳ ಈ ಮುಖಾಮುಖಿಯಲ್ಲಿ ಯಾರು ಸರಿ ಯಾರು ತಪ್ಪು ಎನ್ನುವುದು ಮುಖ್ಯವಲ್ಲ. ಮೇಲ್ಜಾತಿಗಳಿಗೆ ಸೇರಿದ ಯಾರೊಬ್ಬರಿಗೂ ಅರ್ಥವಾಗದ ಚಾರಿತ್ರಿಕ ಒತ್ತಡದಿಂದ ಮತ್ತು ಅಪಾರ ಕಹಿ ಜೀವಾನುಭವಗಳ ನಡುವಿನಿಂದ ಒಡಲುಗೊಂಡ ಅಂಬೇಡ್ಕರ್ ಅವರಿಗೆ ಗಾಂಧಿಯವರ ಜೊತೆಗಿನ ಈ ಮುಖಾಮುಖಿಯಲ್ಲಿ ಪಡೆಯಬೇಕಿದ್ದ ಗೆಲುವು ಬಹು ಮಹತ್ವಪೂರ್ಣವಾಗಿತ್ತು. ಗಾಂಧೀಜಿಯವರಿಗೆ ಅಂಬೇಡ್ಕರರನ್ನು ಒಳಗೊಳ್ಳುವುದು ಮತ್ತು ತನ್ನ ಕಡೆಗೆ ಸೆಳೆಯುವುದು ಭಾರತೀಯ ಸಮಾಜದ ಸಮಗ್ರತೆಯ ಹಿತದೃಷ್ಟಿಯಿಂದ ಬಲುಮುಖ್ಯವಾಗಿತ್ತು. ಆದ್ದರಿಂದ ಪಂಥಗಳಲ್ಲಿ ನಮ್ಮನ್ನು ನಾವು ಸಿಲುಕಿಸಿಕೊಳ್ಳುವ ಬದಲು ಈ ದೇಶದ ಭವಿಷ್ಯದ ಬಗ್ಗೆ ಗಾಢವಾಗಿ ಚಿಂತಿಸಿದ ಈ ಈರ್ವರು ದಾರ್ಶನಿಕ ನಾಯಕರ ಸಾಮಾಜಿಕ ಹಿನ್ನೆಲೆ, ಸಾಂಸ್ಕೃತಿಕ ಸಂಕಷ್ಟ ಹಾಗೂ ರಾಜಕೀಯ ಒತ್ತಡಗಳನ್ನು ಸಹಾನುಭೂತಿಯಿಂದ ಮತ್ತು ವಿವೇಕದಿಂದ ಪರಾಂಬರಿಸಿ ನೋಡುವ ಕೆಲಸ ಬಹು ಮುಖ್ಯವಾದದ್ದು. ಗೆದ್ದದ್ದು ಸತ್ಯವಾಗಬೇಕೆಂದೇನೂ ಇಲ್ಲ ಹಾಗೆಯೇ ಸೋತದ್ದು ಸುಳ್ಳಾಗಬೇಕೆಂದೂ ಇಲ್ಲ ಎನ್ನುವ ಗಾಂಧೀಚಿಂತನೆಯ ದಾರ್ಶನಿಕ ಒಳನೋಟ ಭಾರತೀಯ ಪ್ರಜಾತಂತ್ರ ಹೊಂದಿರಲೇಬೇಕಾದ ಆಧ್ಯಾತ್ಮಿಕ ಆಯಾಮವನ್ನೂ ಸೂಚಿಸುತ್ತದೆ.

ಈ ಲೇಖನದಲ್ಲಿ ನಾವು ನಿದರ್ಶನವಾಗಿ ತೋರಿಸಿದ ಮೂರು ಸಂವಾದಗಳು ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಡೆದ ಅನೇಕ ಸಂವಾದಗಳ ಪರಂಪರೆಯ ಒಂದು ಸಣ್ಣ ಭಾಗ ಅಷ್ಟೆ. ಭಾರತದ ಸ್ವಾತಂತ್ರ್ಯ ಹೋರಾಟ ಅನೂಹ್ಯ ಘಟನೆಗಳ ಮತ್ತು ತ್ಯಾಗ–ಬಲಿದಾನಗಳ ಕಥೆ ಮಾತ್ರವಾಗಿರದೆ ವಿವಿಧ ಸೈದ್ಧಾಂತಿಕ, ಸಾಮುದಾಯಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳಿಂದ ಬಂದ ಜನನಾಯಕರ ನಡುವಿನ ಸಂವಾದಗಳ ಸಂಕಥನವೂ ಆಗಿದೆ. ಈ ಜನನಾಯಕರು ಭಾರತದ ಸಮಾಜ, ಸಂಸ್ಕೃತಿ, ಶಿಕ್ಷಣ, ಆರ್ಥಿಕತೆ ಹಾಗೂ ರಾಜಕಾರಣಗಳು ಹೇಗಿರಬೇಕು ಎನ್ನುವ ಕುರಿತು ಚಿಂತನೆ ನಡೆಸಿದವರು ಮತ್ತು ಆ ದಿಸೆಯಲ್ಲಿ ಕಾರ್ಯಪ್ರವೃತ್ತರಾದವರು. ಈ ಅರ್ಥದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟ ಪರಸ್ಪರ ಸಂವಾದಗಳ ಮೂಲಕ ಸ್ವತಂತ್ರ ಭಾರತದ ಸೈದ್ಧಾಂತಿಕ ಹಾಗೂ ಸಾಂಸ್ಕೃತಿಕ ರೂಪು–ರೇಖೆಗಳ ಕುರಿತು ನಿಷ್ಕರ್ಷೆ ನಡೆಸಿದ ವಿದ್ಯಮಾನ. ಇದು ಸಂಭಾಷಣೆಯ ಮೂಲಕ ಭಾರತವನ್ನು ಕಲ್ಪಿಸುವ ಮತ್ತು ಕಟ್ಟುವ ವಿಧಾನ.

ಸಂಭಾಷಣೆಯ ಮೂಲಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು, ಸಮಾಜವನ್ನು ಪರಿವರ್ತಿಸಬಹುದು, ಸ್ವರಾಜ್ಯವನ್ನು ಸ್ಥಾಪಿಸಬಹುದು, ಸರ್ವೋದಯವನ್ನು ಸಾಧಿಸಬಹುದು ಹಾಗೂ ಆ ಮೂಲಕ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಎಂದು ತಿಳಿದವರು ಗಾಂಧಿ. ಜನವರಿ 30, 1948ರಲ್ಲಿ ನಡೆದ ಗಾಂಧಿಯವರ ಭೀಕರ ಕೊಲೆ ಅವರು ನಂಬಿದ ಸಂಭಾಷಣೆಯ, ಸೌಹಾರ್ದದ ಪ್ರಜಾತಾಂತ್ರಿಕ ಭಾರತದ ಮೇಲೆ ನಡೆದ ಮೊತ್ತಮೊದಲನೆಯ ಮಾರಕ ಆಕ್ರಮಣ. ■

ಮಹಾತ್ಮ ಗಾಂಧಿ ಸ್ಮಾರಕ ಮಧುರೈ ಮ್ಯೂಸಿಯಂ..



ರಾಷ್ಟ್ರಪಿತನ ಸ್ಮರಣೆಯಲ್ಲಿ ಇಂಡಿಯಾದಲ್ಲಿ ಒಟ್ಟು11 ಮ್ಯೂಸಿಯಂಗಳಿವೆ. ಉತ್ತರ ಭಾರತದಲ್ಲಿ 10 ಮ್ಯೂಸಿಯಂ ಇದ್ದರೆ ದಕ್ಷಿಣ ಭಾರತದ ಮಧುರೈನಲ್ಲಿ ಮಹಾತ್ಮ ಗಾಂಧಿ ಸ್ಮಾರಕ ಮ್ಯೂಸಿಯಂ ಇದೆ.

- ಗಾಂಧಿ ಸ್ಮೃತಿ ದರ್ಶನ ಸಮಿತಿ ರಾಜಘಾಟ್ ದಿಲ್ಲಿ,
- ಕೀರ್ತಿಮಂದಿರ ಮ್ಯೂಸಿಯಂ (ಬಾಪೂ ಬರ್ತ್ ಪ್ಲೇಸ್) ಪೋರ್ ಬಂದರ್ ಗುಜರಾತ್,
- ನ್ಯಾಷನಲ್ ಗಾಂಧಿ ಮ್ಯೂಸಿಯಂ ರಾಜಘಾಟ್ ದಿಲ್ಲಿ,
- ಗಾಂಧಿ ಮೆಮೋರಿಯಲ್ ಮ್ಯೂಸಿಯಂ ಬಾರಕ್ ಪುರ ವೆಸ್ಟ್ ಬೆಂಗಾಲ್,
- ಗಾಂಧಿ ಸ್ಮಾರಕ ಸಂಗ್ರಹಾಲಯ ಗಾಂಧಿ ಮೈದಾನ ಪಾಟ್ನಾ ಬಿಹಾರ,
- ಗಾಂಧಿ ನ್ಯಾಷನಲ್ ಮೆಮೋರಿಯಲ್ ಸೊಸೈಟಿ ಪುಣೆ ಮಹಾರಾಷ್ಟ್ರ,
- ಮಣಿಭವನ್ ಗಾಂಧಿ ಸಂಗ್ರಹಾಲಯ ಬಾಂಬೆ ಮಹಾರಾಷ್ಟ್ರ,
- ಸಾಬರಮತಿ ಆಶ್ರಮ & ಮ್ಯೂಸಿಯಂ ಅಹಮದಾಬಾದ್ ಗುಜರಾತ್,
- ನ್ಯಾಷನಲ್ ಸಾಲ್ಟ್ ಸತ್ಯಾಗ್ರಹ ಮೆಮೋರಿಯಲ್ ಮ್ಯೂಸಿಯಂ ದಾಂಡಿ ಗುಜರಾತ್,
- ಗಾಂಧಿ ತೀರ್ಥ ಜೈನ್ ಹಿಲ್ಸ್ ಜಲಗಾಂವ್ ಮಹಾರಾಷ್ಟ್ರ,
- ಮಹಾತ್ಮ ಮತ್ತು ಮದುರೈ ಮ್ಯೂಸಿಯಂ

ಲೋಕಾರ್ಪಣೆ : ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ಪಂಡಿತ್ ನೆಹರೂ ಅವರು 15.04.1959 ರಂದು ಈ ಮ್ಯೂಸಿಯಂ ನ್ನು ಲೋಕಾರ್ಪಣೆ ಮಾಡಿದರು. ಮಧುರೈ ನಗರದ ತಮುಕ್ಕುಂ ಪಾರ್ಕ್ ರಸ್ತೆಯಲ್ಲಿ ಈ ಮ್ಯೂಸಿಯಂ ಇದೆ. ಭವ್ಯವಾದ ಈ ಕಟ್ಟಡವನ್ನು ಕ್ರಿ.ಶ.1670 ರಲ್ಲಿ ನಿರ್ಮಿಸಲಾಗಿದೆ. ಇದು ನಾಯಕ್ ಸಾಮ್ರಾಜ್ಯದ ರಾಣಿ ಮಂಗಮ್ಮಾಳ್ ಅರಮನೆಯಾಗಿತ್ತು. ನಂತರದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಅವಧಿಯಲ್ಲಿ ಆಂಗ್ಲರು ಈ ಅರಮನೆಯನ್ನು ವಶಮಾಡಿಕೊಂಡು ತಮ್ಮ ಆಳ್ವಿಕೆ ಅರಂಭಿಸಿದ್ದರು.







ಸ್ವಾತಂತ್ರ್ಯದ ನಂತರ 1955ರಲ್ಲಿ ಈ ಅರಮನೆಯನ್ನು ಸರಕಾರಕ್ಕೆ ಬಿಟ್ಟು ಕೊಡಲಾಯಿತು.ಒಟ್ಟು 13 ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ ಈ ಅರಮನೆಯಲ್ಲಿ ನಿರ್ಮಿಸಿರುವ ಮ್ಯೂಸಿಯಂ ದಕ್ಷಿಣ ಭಾರತದ ಹೆಮ್ಮೆಯಾಗಿದೆ. ಬಾಪೂ ಬರೆದ ಕೃತಿಗಳೂ ಸೇರಿದಂತೆ ಜಗತ್ತಿನ ವಿವಿಧ ಕ್ಷೇತ್ರದ ಶ್ರೇಷ್ಠರು, ಲೇಖಕರು ಬಾಪೂ ಬಗ್ಗೆ ಬರೆದಿರುವ ಸಾವಿರಾರು ಪುಸ್ತಕಗಳ ಸಂಗ್ರಹ ಇಲ್ಲಿದೆ.

ಭಾರತದ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಮುಂಚೂಣಿ ನಾಯಕರಾಗಿ ಗಾಂಧಿ ನಡೆಸುತ್ತಿದ್ದ ರಾಷ್ಟ್ರೀಯ ಹೋರಾಟದ ಸಮಯದಲ್ಲಿ ತೆಗೆದ ಬಾಪೂವಿನ ಭಾವಚಿತ್ರಗಳು ಇಲ್ಲಿವೆ. ಅದರಲ್ಲೂ ವಿಶೇಷವಾಗಿ ತಮಿಳುನಾಡಿಗೆ ಬಾಪೂ ಬಂದು ಹೋದ ನೂರಾರು ಫೋಟೋಗಳ ಗ್ಯಾಲರಿ ಪ್ರತ್ಯೇಕವಾಗಿದೆ. ಗ್ಯಾಲರಿಯಲ್ಲಿ ಪಾದರಕ್ಷೆಗಳು, ತುಳಸಿ ಮಣಿ, ಕನ್ನಡಕ, ಗೀತೆಯ ಪುಸ್ತಕ, ಹೀಗೆ ಗಾಂಧಿ ಬಳಸುತ್ತಿದ್ದ ವಿವಿಧ ಪರಿಕರಗಳ ಸಂಗ್ರಹವಿದೆ.

ಹಂತಕ ನಾಥೋರಾಮ್ ಗೋಡ್ಸೆ 1948 ನೇ ಇಸ್ವಿ ಜನವರಿ 30ರ ಸಂಜೆ 05:17ಕ್ಕೆ ಮಹಾತ್ಮನ ಎದೆಗೆ ಗುಂಡು ಹೊಡೆದು ಹತ್ಯೆ ಮಾಡಿದಾಗ ಗಾಂಧಿ ಧರಿಸಿದ್ದ ನೆತ್ತರಿನ ಹನಿಗಳ ಬಟ್ಟೆಗಳು, ಸೊಂಟದಲ್ಲಿ ಸಿಕ್ಕಿಸಿಕೊಳ್ಳುತ್ತಿದ್ದ ಗಡಿಯಾರ ಇಲ್ಲಿಯ ಸಂಗ್ರಹಾಲಯದಲ್ಲಿದೆ. ಮಹಾರಾಷ್ಟ್ರದ ವಾರ್ಧಾ – ಸೇವಾಗ್ರಾಮ ಆಶ್ರಮದ ಮಾದರಿಯ ಬಾಪೂಕುಟಿ ಮತ್ತು ಗ್ರಾಮೀಣ ಭಾರತದ ಚಿತ್ರಣವನ್ನೂ ಇಲ್ಲಿ ಕಾಣಬಹುದು.



ಗಾಂಧಿ ಭೇಟಿ : ಭಾರತ ಸ್ವಾತಂತ್ರ್ಯ ಸಂಘರ್ಷದ ಸಂದರ್ಭದಲ್ಲಿ ಒಟ್ಟು ನಾಲ್ಕು ಸಲ ಮಧುರೈಗೆ ಬಾಪೂ ಭೇಟಿ ನೀಡಿದ್ದಾರೆ.

ಮೊದಲ ಭೇಟಿ : ದೇಶದಲ್ಲಿ ರೌಲಟ್ ಆಕ್ಟ್ ವಿರುದ್ಧ ಭಾರತೀಯರನ್ನು ಸಜ್ಜುಗೊಳಿಸಲು 1919ರ ಮಾರ್ಚ್ ತಿಂಗಳ 26 ಮತ್ತು 27 ರಂದು ಆಗಮಿಸಿದ್ದ ಗಾಂಧಿ ಇಲ್ಲಿ ಎರಡು ದಿನ ತಂಗಿ ನಂತರ ಮುಂದಿನ ಪಯಣ ಬೆಳೆಸಿದರು.

ಎರಡನೇ ಭೇಟಿ: ಸ್ಥಳೀಯ ವೆಸ್ಟ್ ಮಾಸಿ ಸ್ಟ್ರೀಟ್ 251– ನಂಬರ್‌ನ ಮನೆಯಲ್ಲಿ 1921 ನೇ ಇಸ್ವಿ ಸೆಪ್ಟೆಂಬರ್ 20 ರಿಂದ 22 ರ ತನಕ ಎರಡು ದಿನ ತಂಗಿದ್ದರು. ಆ ಸಮಯದಲ್ಲಿ ತಮಿಳು ನಾಡಿನ ಬಡ ಜನರು ತೊಡುತ್ತಿದ್ದ ಅರೆ ತುಂಡು ಉಡುಪನ್ನು ನೋಡಿ ಮನ ನೊಂದ ಬಾಪೂ ಭಾರತದ ಈ ಬಡ ಜನರ ರೀತಿಯಲ್ಲಿಯೇ ತಾವು ಸಹ ಇನ್ನು ಮುಂದೆ ತುಂಡು ಉಡುಗೆ ಧರಿಸುವುದಾಗಿ ಸಂಕಲ್ಪ ತಾಳಿ ತಾವು ಮೈ ತುಂಬಾ ತೊಟ್ಟಿದ್ದ ಬಟ್ಟೆಯನ್ನು ಕಳಚಿ ಹಾಕಿದರು.ಅಂದಿನಿಂದ ತಾವು ನಿಧನರಾಗುವವರೆಗೂ ಗಾಂಧಿ ತುಂಡು ಉಡುಗೆಯನ್ನೇ ಸಾರ್ವಜನಿಕವಾಗಿ ಧರಿಸುತ್ತಿದ್ದರು . ಇದು ಗಾಂಧೀಜಿಯವರ ಬದುಕಿನಲ್ಲಿ ಸ್ಮರಣೀಯವಾದ ಐತಿಹಾಸಿಕ ಘಟನೆಯಾಗಿದೆ.


ಮೂರನೇ ಭೇಟಿ : 1927 ಸೆಪ್ಟೆಂಬರ್ 28 ಮತ್ತು 30 ರ ವರೆಗೆ ಎರಡು ದಿನ ಸ್ವದೇಶಿ ಮತ್ತು ಖಾದಿ ಪ್ರಚಾರಕ್ಕೆಂದು ಆಗಮಿಸಿ ದೇಶವಾಸಿಗಳಲ್ಲಿ ದೇಶಪ್ರೇಮ ಇನ್ನಷ್ಟು ಪ್ರಜ್ವಲಿಸುವಂತೆ ಮಾಡಿದರು.


ನಾಲ್ಕನೇ ಭೇಟಿ : 1946ನೇ ಇಸವಿ ಫೆಬ್ರವರಿ 2 ಮತ್ತು 3 ನೇ ತಾರೀಖಿನಂದು ಮಧುರೈ ಮೀನಾಕ್ಷಿ ದೇವಸ್ಥಾನಕ್ಕೆ ಹರಿಜನರನ್ನು ಕರೆದುಕೊಂಡು ಹೋಗಿ ಪ್ರವೇಶ ಮಾಡಿಸಿದರು.

ಆ ಕುರುಹಾಗಿ ಈಗಲೂ ದೇವಸ್ಥಾನದ ಪಕ್ಕ ಗಾಂಧೀಜಿಯವರ ಪ್ರತಿಮೆಯನ್ನು ನಿರ್ಮಿಸಿ ಆ ಐತಿಹಾಸಿಕ ಸ್ಮೃತಿಗಾಗಿ ಕಲ್ಲಿನಲ್ಲಿ ಮಾಹಿತಿ ಬರೆಯಲಾಗಿದೆ. ಹೀಗೆ ಮಧುರೈ ಜೊತೆಗಿನ ಮಹಾತ್ಮನ ನೆನಪುಗಳನ್ನು ಈ ಮ್ಯೂಸಿಯಂ ಕಟ್ಟಿ ಕೊಡುತ್ತದೆ.



- ನೇತಾಜಿ ಗಾಂಧಿ





ಗಾಂಧೀಜಿ ನೆಚ್ಚಿನ ಬಾಬು ರಾಜೇಂದ್ರ ಪ್ರಸಾದ್

"ನನ್ನ ಕೈಯಿಂದ ವಿಷದ ಬಟ್ಟಲನ್ನಾದರೂ ಸ್ವೀಕರಿಸಲು ಹಿಂಜರಿಯದ ವ್ಯಕ್ತಿಯೊಬ್ಬನಿದ್ದಾನೆ. ಆತನೇ ರಾಜೇಂದ್ರ ಪ್ರಸಾದ್" ಎನ್ನುತಿದ್ದರು ಗಾಂಧೀಜಿ. ಈ ಮಾತು ಬಾಬು ರಾಜೇಂದ್ರ ಪ್ರಸಾದರು ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಆದರ್ಶಗಳಲ್ಲಿ ಇಟ್ಟಿದ್ದ ಅನನ್ಯ ವಿಶ್ವಾಸಕ್ಕೆ ಸಾಕ್ಷಿ ಎನಿಸಿವೆ. ಹಾಗೆಂದ ಮಾತ್ರಕ್ಕೆ ಪ್ರಸಾದರು ಗಾಂಧೀಜಿಯವರ ವ್ಯಕ್ತಿಪೂಜಕರಾಗಿದ್ದರು ಎಂದರ್ಥವಲ್ಲ. ಭಿನ್ನಾಭಿಪ್ರಾಯ ಬಂದಾಗ ತಮ್ಮ ನಿಲುವನ್ನು ಸ್ಪಷ್ಟಪಡಿಸಲು ಪ್ರಸಾದರು ಹಿಂಜರಿಯುತ್ತಿರಲಿಲ್ಲ. ಆದರೆ ಒಮ್ಮೆ ಗಾಂಧೀಜಿ ಒಂದು

ನಿರ್ಧಾರ ತೆಗೆದುಕೊಂಡಮೇಲೆ, ಅವರಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದರು.

1884ರ ಡಿಸೆಂಬರ್ 3ನೇ ತಾರೀಖು ಬಿಹಾರದ ಜೇರಡ್ಡೆ ಎಂಬ ಹಳ್ಳಿಯಲ್ಲಿ ಪ್ರಸಾದರು ಜನಿಸಿದರು. ತಂದೆ ಮಹದೇವ ಸಹಾಯ್; ಸಂಸ್ಕೃತ ಮತ್ತು ಫಾರಸಿ ವಿದ್ವಾಂಸರು; ಅಲ್ಲದೆ ವೈದ್ಯರು. ತಾಯಿ ಕಮಲೇಶ್ವರಿ ದೇವಿ; ಸಂಪ್ರದಾಯಸ್ಥರು, ದೈವಭಕ್ತೆ, ಪ್ರತಿದಿನವೂ ರಾಮಾಯಣದ ಕತೆಗಳನ್ನು ಮಗನಿಗೆ ಹೇಳುವರು. ಇಬ್ಬರು ಗಂಡು ಮತ್ತು ಮೂವರು ಹೆಣ್ಣು ಮಕ್ಕಳ ಕುಟುಂಬ. ಬಡವ – ಬಲ್ಲಿದ, ಹಿಂದೂ–ಮುಸ್ಲಿಂ ಮುಂತಾದ ಯಾವ ಭೇದ ಭಾವವೂ ಇಲ್ಲದ ಆಡಂಬರಹಿತವಾದ ಗ್ರಾಮೀಣ ಜನರ ಒಡನಾಟದಲ್ಲಿ ಬೆಳೆದ ಪ್ರಸಾದರು ಉಚ್ಚ ಆದರ್ಶ, ನೈತಿಕ ನಡೆವಳಿಕೆ ಮತ್ತು ಋಜು ಸ್ವಭಾವವನ್ನು ಮೈಗೂಡಿಸಿಕೊಂಡರು. ಕೇವಲ 12ನೇ ವಯಸ್ಸಿನಲ್ಲೇ ರಾಜೇಂದ್ರ ಪ್ರಸಾದ್‌ಗೆ ಬನ್ನಿದೇವಿಯವರೊಂದಿಗೆ ವಿವಾಹವೂ ಆಯಿತು.

ಆಗಿನ ಪದ್ಧತಿಯಂತೆ, ಪ್ರಸಾದರ ಮೊದಲ ಶಿಕ್ಷಣ ಪರ್ಷಿಯನ್ ಭಾಷೆಯಲ್ಲಿ, ಒಬ್ಬ ಮುಸಲ್ಮಾನ್ ಮೌಲ್ವಿಯಿಂದ. ಪ್ರತಿಭಾಶಾಲಿಯಾಗಿದ್ದ ಪ್ರಸಾದರು ಶಾಲಾ ಕಾಲೇಜುಗಳಲ್ಲಿ ಅತ್ಯಂತ ಮೇಧಾವಿ ವಿದ್ಯಾರ್ಥಿ ಎನ್ನಿಸಿಕೊಂಡಿದ್ದರು. ಕಲ್ಕತ್ತಾ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಯಿಂದ ಹಿಡಿದು ಬಿ.ಎ., ಎಂ.ಎ. ಹಾಗೂ ಕಾನೂನು ಪರೀಕ್ಷೆಗಳಲ್ಲಿ ಅವರಿಗೇ ಪ್ರಥಮಸ್ಥಾನ. ಚರ್ಚೆ ಮತ್ತು ಪ್ರಬಂಧ ಸ್ಪರ್ಧೆಗಳಲ್ಲಿ ಬಹುಮಾನಗಳು ಇವರಿಗೆ ಕಟ್ಟಿಟ್ಟಿದ್ದು.

ಪ್ರಸಾದರ ಸಮಾಜ ಸೇವಾ ಕಾರ್ಯಗಳಿಗೆ ವಿದ್ಯಾರ್ಥಿ ದೆಸೆಯಲ್ಲೇ ಅಡಿಪಾಯ ಹಾಕಲಾಗಿತ್ತು ತಮ್ಮ ಅಣ್ಣ ಮಹೇಂದ್ರ ಪ್ರಸಾದರಿಂದ "ಸ್ವದೇಶಿ"ಯ ಪಾಠ ಕಲಿತಿದ್ದ ಪ್ರಸಾದರು ಸೋದರಿ ನಿವೇದಿತಾ, ಸುರೇಂದ್ರನಾಥ ಬ್ಯಾನರ್ಜಿ ಮುಂತಾದ ದೇಶ ಪ್ರೇಮಿಗಳ ಭಾಷಣಗಳಿಂದ ಪ್ರಭಾವಿತರಾಗಿದ್ದರು. ವಿದ್ಯಾರ್ಥಿ ವೃಂದದಲ್ಲಿ ಇವರು ಜನಪ್ರಿಯ ನಾಯಕ. 1906ರಲ್ಲಿ ಬಿಹಾರಿ ವಿದ್ಯಾರ್ಥಿಗಳನ್ನು ಒಂದುಗೂಡಿಸಿ "Bihari students conference" ಎಂಬ ಸಂಘವನ್ನು ಕಟ್ಟಿದರು.

ಪ್ರಸಾದರ ವೃತ್ತಿ ಜೀವನ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಆರಂಭಗೊಂಡಿತು. ಆನಂತರ ಅವರು ಕಲ್ಕತ್ತಾ ಮತ್ತು ಪಾಟ್ನಾಗಳಲ್ಲಿ ವಕೀಲ ವೃತ್ತಿ ನಡೆಸಿದರು. ಪಾಟ್ನಾ ವಿಶ್ವ ವಿದ್ಯಾಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡಿದ್ದರು.

ಅಂದಿನ ಕಾಲದಲ್ಲಿ ಇಡೀ ದೇಶವೇ ಒಂದು ಹೊಸ ಚೈತನ್ಯವನ್ನು ಪಡೆದಿತ್ತು. ಅಂದಿನ ವಾತಾವರಣವೇ ಒಂದು ಹೊಸ ಬಾಳಿನ ನಿರೀಕ್ಷೆ ಮತ್ತು ಆದರ್ಶದ ಅಲೆಗಳಿಂದ ತುಂಬಿತ್ತು ಎಂದು ಪ್ರಸಾದರು ಹೇಳುತ್ತಾರೆ. ಬಂಗಾಲದ ವಿಭಜನೆ, ವಿದೇಶಿ ವಸ್ತುಗಳ ನಿರಾಕರಣೆ, ಸ್ವದೇಶಿ ಚಳುವಳಿ ಮುಂತಾದ ಅನೇಕ ವಿಷಯಗಳು ಎಲ್ಲೆಡೆಯೂ ಚರ್ಚಿತವಾಗುತ್ತಿದ್ದವು. ಬಿಹಾರದ ಸ್ಥಿತಿಗತಿಗಳನ್ನು ಸುಧಾರಿಸಲು ಪ್ರಸಾದರು ನಡೆಸುತ್ತಿದ್ದ ಚಟುವಟಿಕೆಗಳು ಗೋಪಾಲಕೃಷ್ಣ ಗೋಖಲೆಯವರ ಗಮನಕ್ಕೆ ಬಂತು. ಆಗ ತಾನೇ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ್ದ ಗಾಂಧೀಜಿಯವರ ಗಮನವನ್ನೂ ಸೆಳೆಯಿತು.

ಗಾಂಧೀಜಿಯವರನ್ನು ಪ್ರಸಾದರು 1915ರ ವರ್ಷದಲ್ಲಿ ಮೊದಲು ಭೇಟಿಯಾದರು. ಆದರೆ ಈ ಭೇಟಿಗಳು ಅಷ್ಟೇನೂ ಪರಿಣಾಮ ಬೀರಿರಲಿಲ್ಲ. ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಕ್ರಿಯಾಶಕ್ತಿಗಳ ಪರಿಚಯವಾದದ್ದು ಚಂಪಾರಣ್ಯದಲ್ಲಿ. ಪ್ರಸಾದರು ಅಲ್ಲಿಂದ ಮುಂದೆ ಗಾಂಧೀಜಿಯವರ ಅನುಯಾಯಿಯಾದರು. ಕೈತುಂಬ ವರಮಾನ ತರುತ್ತಿದ್ದ ವಕೀಲ ವೃತ್ತಿಯನ್ನು ತ್ಯಜಿಸಿದರು. ಜನರ ಹಿತಕ್ಕೆ ಮಾರಕವಾದ ಕಾನೂನುಗಳೆಲ್ಲವನ್ನೂ ವಿರೋಧಿಸಿದರು. ಈ ಅಸಹಕಾರಗಳಿಂದ ಸರ್ಕಾರದ ದೃಷ್ಟಿಯಲ್ಲಿ ದೇಶದ್ರೋಹಿ ಎನಿಸಿಕೊಂಡರು. ಸೆರೆಮನೆವಾಸ, ಸ್ವಂತ ಗಳಿಕೆ ಇಲ್ಲದ್ದರಿಂದ ಕಷ್ಟಕಾರ್ಪಣ್ಯಗಳು, ಎಡೆಬಿಡದೆ ಕಾಡುತ್ತಿದ್ದ ಅಸ್ತಮಾ ಇವು ಯಾವುವೂ ಅವರ ಕಾರ್ಯಚಟುವಟಿಕೆಗಳಿಗೆ ಅಡ್ಡಿಬರಲಿಲ್ಲ. ಸದಾ ಭಾರತದ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದರು. ಭಾಷಣ ಮತ್ತು ಲೇಖನಗಳ ಮೂಲಕ ಜನ ಜಾಗೃತಿ ಮೂಡಿಸಲು ಶ್ರಮಿಸುತ್ತಿದ್ದರು.

1934ರ ಜನವರಿ 15ರಂದು ಸಂಭವಿಸಿದ ಭಯಂಕರ ಭೂಕಂಪ ಹಾಗೂ ಪ್ರವಾಹಗಳಿಂದ ಇಡೀ ಬಿಹಾರವೇ ತತ್ತರಿಸಿತ್ತು. ಅದರ ಮರುದಿನವೇ ಸೆರೆಮನೆಯಿಂದ ಬಿಡುಗಡೆ ಹೊಂದಿದ ಪ್ರಸಾದರು, ತಮ್ಮ ತೀವ್ರ ಅನಾರೋಗ್ಯವನ್ನೂ ಲೆಕ್ಕಿಸದೆ ಬಹುದೊಡ್ಡ ಪ್ರಮಾಣದಲ್ಲಿ ಸಂತ್ರಸ್ತರಿಗೆ ನೆರವು ನೀಡುವ ಕಾರ್ಯವನ್ನು ಸಂಘಟಿಸಿದರು. ಮರುವರ್ಷವೇ ಕ್ವೆಟ್ಟಾದಲ್ಲಿ ಸಂಭವಿಸಿದ ಭೂಕಂಪದಲ್ಲಿ ಸಂತ್ರಸ್ತರಾದವರಿಗೂ ನೆರವು ಕಳಿಸಲು ಶ್ರಮಿಸಿದರು. ಸರ್ಕಾರದ ಕಾರ್ಯಕ್ರಮಕ್ಕಿಂತ ಯಶಸ್ವಿಯಾದ ಅವರ ಕಾರ್ಯಕ್ರಮ ಅವರ ಸಂಘಟನಾ







ಚಾತುರ್ಯಕ್ಕೆ ಹಾಗೂ ಕ್ರಿಯಾಶಕ್ತಿಗೆ ಸಾಕ್ಷಿಯಾಗಿದ್ದವು. ಅವರ ಈ ಎಲ್ಲ ಜನಹಿತ ಕಾರ್ಯಗಳಿಂದಾಗಿ ರಾಜೇಂದ್ರ ಪ್ರಸಾದರು ಜನರ ಪ್ರೀತಿಯ "ರಾಜೆನ್ ಬಾಬು" ಆದರು.

1934ರಲ್ಲಿ ಬೊಂಬಾಯಿ (ಈಗಿನ ಮುಂಬೈ) ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ; 1929 ಹಾಗೂ 1936ರಲ್ಲಿ ಬಿಹಾರದ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷತೆ, ಅಖಿಲ ಭಾರತ ಕಾಂಗ್ರೆಸ್ನ ಅಧ್ಯಕ್ಷ ಪದವಿ - ಇವು ಅವರು ಅಲಂಕರಿಸಿದ ಕೆಲವು ಪ್ರಮುಖ ಹುದ್ದೆಗಳು.

1935ರ ಭಾರತ ಸರ್ಕಾರ ಕಾಯಿದೆ ಪ್ರಕಾರ 1937ರಲ್ಲಿ ಚುನಾವಣೆ ನಡೆದು, ಮಂತ್ರಿ ಮಂಡಲಗಳು ರಚನೆಯಾಗುವ ಕಾಲಕ್ಕೆ ಸಕ್ರಿಯ ಪಾತ್ರ ವಹಿಸಿದ ಕಾಂಗ್ರೆಸ್ ಸಂಸದೀಯ ಸಮಿತಿಯ ಒಬ್ಬ ಪ್ರಮುಖ ಸದಸ್ಯರು ರಾಜೆನ್ ಬಾಬು. 1946ರಲ್ಲಿ ಭಾರತದ ತಾತ್ಕಾಲಿಕ ಸರ್ಕಾರದಲ್ಲಿ ಆಹಾರ ಮತ್ತು ಕೃಷಿ ಖಾತೆಗಳ ಮಂತ್ರಿಯಾಗಿ ಗಣನೀಯ ಸಾಧನೆ ಮಾಡಿದರು. ಅದೇ ವರ್ಷ ಭಾರತದ ಸಂವಿಧಾನವನ್ನು ರೂಪಿಸಲು ಹಾಗೂ ತಾತ್ಕಾಲಿಕ ಸಂಸತ್ತಾಗಿ ಕಾರ್ಯ ನಿರ್ವಹಿಸಲು ರಚಿತವಾದ ಸಂವಿಧಾನ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾದರು. ಭಾರತೀಯ ಸಂವಿಧಾನ ನಿರ್ಮಾಣದಲ್ಲಿ ರಾಜೆನ್ಬಾಬು ಅವರ ಕಾಣಿಕೆಯು ಅಮೂಲ್ಯವಾದುದು. 1950ರ ಜನವರಿ 26ರಂದು ಭಾರತವು ಗಣರಾಜ್ಯವಾದಾಗ ಸ್ವತಂತ್ರ ಭಾರತದ ಮೊಟ್ಟ ಮೊದಲ ರಾಷ್ಟ್ರಪತಿಯಾಗಿ ಪ್ರಮಾಣವಚನ ಸ್ವೀಕರಿಸಿದರು. 1952 ಮತ್ತು 1957ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದ ಮೇಲೂ ರಾಜೆನ್ ಬಾಬು ಅವರೇ ರಾಷ್ಟ್ರಪತಿಯಾಗಿ ಆಯ್ಕೆಯಾದರು. ಒಟ್ಟು 12 ವರ್ಷಗಳ ಕಾಲ ರಾಷ್ಟ್ರಪತಿಗಳಾಗಿದ್ದ ರಾಜೆನ್ ಬಾಬು ಆ ಸ್ಥಾನಕ್ಕೆ ಒಂದು ಅನನ್ಯ ಗೌರವ ತಂದುಕೊಟ್ಟರು. 1962ರಲ್ಲಿ ರಾಷ್ಟ್ರಪತಿ ಸ್ಥಾನದಿಂದ ನಿವೃತ್ತರಾಗಿ, ತಾವೇ ಪಾಟ್ನಾದಲ್ಲಿ ಸ್ಥಾಪಿಸಿದ ಸದಾಕತ್ ಆಶ್ರಮದಲ್ಲಿ ನೆಲೆಸಿದರು.



ಕಡೆಯ ದಿನಗಳಲ್ಲಿ ರಾಜೇಂದ್ರ ಪ್ರಸಾದರು ತುಂಬ ದುಃಖ ಅನುಭವಿಸಿದರು. ಪತ್ನಿ ಹಾಗೂ ಪ್ರೀತಿಯ ಅಕ್ಕ ಇವರ ಮರಣ, ಚೀನಾ ದೇಶ ಭಾರತದ ಮೇಲೆ ನಡೆಸಿದ ಆಕ್ರಮಣ ಇವೆಲ್ಲವೂ ಅವರನ್ನು ತುಂಬ ದುಃಖಕ್ಕೀಡು ಮಾಡಿದವು. ಕೇವಲ ಒಂದು ವರ್ಷದೊಳಗೇ 1963ರ ಫೆಬ್ರವರಿ 28ರಂದು ನಿಧನರಾದರು.


ದೇಶದ ಅತ್ಯುಚ್ಚ ಪದವಿಯನ್ನಲಂಕರಿಸಿದರೂ, ಆ ಪದವಿಗೆ ತಕ್ಕ ವೈಭವವೆಲ್ಲವೂ ಅವರನ್ನು ಸುತ್ತುವರಿದಿದ್ದರೂ, ಅವರು ಮಾತ್ರ ಆಡಂಬರ ರಹಿತ ಜೀವನವನ್ನೇ ನಡೆಸಿಕೊಂಡು ಬಂದರು. ಸಂವಿಧಾನಿಕವಾಗಿ ರಾಷ್ಟ್ರಪತಿ ಸ್ಥಾನಕ್ಕೆ ಘನತೆ ಹಾಗೂ ಗೌರವಗಳನ್ನು ದೊರಕಿಸಿಕೊಟ್ಟರು. ಜನರ ಸಂಪರ್ಕವನ್ನು ಉಳಿಸಿಕೊಳ್ಳುವುದಕ್ಕಾಗಿ, ರೈಲಿನಲ್ಲೇ ಪ್ರವಾಸ ಮಾಡುತ್ತಿದ್ದರು. ತಮಗೆ ನಿಗದಿಯಾಗಿದ್ದ ಸಂಬಳ ಮತ್ತು ಭತ್ಯಗಳನ್ನು ಸ್ವ-ಇಚ್ಛೆಯಿಂದ 2,500 ರೂಪಾಯಿಗಳಿಗೆ ಇಳಿಸಿಕೊಂಡರು. ಶ್ರೀ ಕೆ.ಎಂ. ಮುನ್ಷಿಯವರ ಅಹ್ವಾನದ ಮೇಲೆ ಐತಿಹಾಸಿಕ ಸೋಮನಾಥ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ರಾಜೇಂದ್ರ ಪ್ರಸಾದರಿಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಸಮಾನ ಪ್ರಭುತ್ವವಿತ್ತು. ಈ ಎರಡರಲ್ಲಿಯೂ ಪುಸ್ತಕಗಳನ್ನು ಬರೆದಿದ್ದಾರೆ. "ಚಂಪಾರಣ್ ಸತ್ಯಾಗ್ರಹ" ಮಹಾತ್ಮಾ ಗಾಂಧಿಯವರ ಪದತಲದಲ್ಲಿ "ಆತ್ಮಕಥೆ", "ಭಾರತದ ವಿಭಜನೆ" ಇವು ಅವರ ಕೆಲವು ಪ್ರಮುಖ ಪುಸ್ತಕಗಳು. ಅಲಹಾಬಾದ್ ಹಾಗೂ ದಿಲ್ಲಿ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಡಾಕ್ಟರೇಟ್ ನೀಡಿದ್ದವು. 1962ರಲ್ಲಿ "ಭಾರತ ರತ್ನ" ಪ್ರಶಸ್ತಿಯನ್ನು ಅವರಿಗೆ ನೀಡಲಾಯಿತು.

ಕೃಪೆ – ಕನ್ನಡ ಸಂಪದ

ಗಾಂಧಿ ಮತ್ತು ಕರ್ನಾಟಕ

ಭಾಗ – 9



ಗಾಂಧಿ ಮತ್ತು ಕರ್ನಾಟಕದ ನಡುವೆ ಒಂದು ಮಧುರ ಸಂಬಂಧವಿದೆ. ಕರ್ನಾಟಕದ ಜೊತೆಗಿನ ಗಾಂಧೀಜಿಯವರ ಒಡನಾಟ ಮತ್ತು ಸಂಬಂಧವನ್ನು ಇತ್ತೀಚಿನ ಪೀಳಿಗೆಯ ಓದುಗರಿಗೆ ತಲುಪಿಸುವ ಉದ್ದೇಶ ನಮ್ಮದು. ಅದಕ್ಕಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆಯಾದ **"ಗಾಂಧಿ ಮತ್ತು ಕರ್ನಾಟಕ"** ಕೃತಿಯನ್ನು ಸರಣಿ ಮಾದರಿಯಲ್ಲಿ ಪ್ರತಿ ತಿಂಗಳು ಬಾಪು ಪ್ರಪಂಚ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.

ಭಾರತದ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ ಅಪಾರವಾದುದು,ಅದರಲ್ಲಿಯೂ ವಿದುರಾಶ್ವಥ ದುರಂತ, ಶಿವಪುರ ಧ್ವಜ ಸತ್ಯಾಗ್ರಹ ಹಾಗೂ 1982ರ ನಂತರದ (ಮೈಸೂರು ಚಲೋ ಚಳವಳಿಗಳು) ಕರ್ನಾಟಕದ ಕೊಡುಗೆಯೆಂದೆ ಭಾವಿಸುವ ಮಹತ್ವಪೂರ್ಣ ಘಟನೆಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ . ಅದಲ್ಲದೆ ಗಾಂಧೀಜಿಯವರು ವಿಶ್ರಾಂತಿಗಾಗಿ ಕರ್ನಾಟಕದ ನಂದಿ ಗಿರಿಧಾಮವನ್ನು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕದ ಸುದೈವ. ಅಲ್ಲಿ ಅವರ ಆರೋಗ್ಯ ಸುಧಾರಿಸಿದ್ದು. ಗಾಂಧೀಜಿಯವರು ಕರ್ನಾಟಕಕ್ಕೆ 1915ರಿಂದ 1937ರ ಅವಧಿಯಲ್ಲಿ 19 ಸಲ ಆಗಮಿಸಿದ್ದಾರೆ. ಅವರು ಅಸಹಕಾರ ಆಂದೋಲನಕ್ಕಾಗಿ, ಖಾದಿ ಸ್ವದೇಶಿ ಆಂದೋಲನಕ್ಕಾಗಿ, ಕಾಂಗ್ರೆಸ್ ಅಧಿವೇಶನಕ್ಕಾಗಿ, ನಿಧಿ ಸಂಗ್ರಹಕ್ಕಾಗಿ, ಖಾದಿ ಪ್ರಚಾರಕ್ಕಾಗಿ, ಹರಿಜನ ನಿಧಿ ಸಂಗ್ರಹಕ್ಕಾಗಿ, ಹುದಲಿ ಸಮ್ಮೇಳನಕ್ಕಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಗಾಂಧೀಜಿಯವರೇ ಸ್ವತಃ ತಮ್ಮ ' ಹರಿಜನ ' ಮತ್ತು ' ಯಂಗ್ ಇಂಡಿಯಾ ' ಪತ್ರಿಕೆಗಳಲ್ಲಿ 1924, 1927, 1936, ಹಾಗೂ 1937ರ ಅವಧಿಯಲ್ಲಿ ಪ್ರಕಟಿಸಿದ್ದಾರೆ.

ಈ ಸಮಗ್ರ ದಾಖಲೆಗಳು ' ಗಾಂಧೀ ಮತ್ತು ಕರ್ನಾಟಕ ' ಕೃತಿಯಲ್ಲಿ ದಾಖಲಾಗಿವೆ. ಹಾಗೂ ಕರ್ನಾಟಕದ ಅಂದಿನ ಮುಂಚೂಣಿ ನಾಯಕರ ಪತ್ರ ವ್ಯವಹಾರಗಳು ಅಂದಿನ ಛಾಯಾಚಿತ್ರಗಳು ಸಹ ದಾಖಲಾಗಿವೆ. ಅಂದಿನ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ಕೂಡಾ ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಕರ್ನಾಟಕಕ್ಕೆ ಗಾಂಧೀಜಿಯವರು ಬಂದಿದ್ದ ಹಾಗೂ ನಡೆದ ಘಟನೆಗಳ ಅವಲೋಕನವನ್ನು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪಿನ ಬುತ್ತಿಯಿಂದ ತೆಗೆದಿಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಿದ್ದವನಹಳ್ಳಿ ಕೃಷ್ಣಶರ್ಮರ ಮುಂದಾಳತ್ವದಲ್ಲಿ ಅಂದಿನ ಸಂಗ್ರಹಕಾರರು ಸಂಗ್ರಹಿಸಿದ್ದಾರೆ. ಕರ್ನಾಟಕದ 44 ಮಹನೀಯರು ತಮ್ಮ ನೆನಪುಗಳ ಬುತ್ತಿಯಿಂದ ಗಾಂಧೀಜಿಯವರ ಕರ್ನಾಟಕದ ಭೇಟಿಯಲ್ಲಿ ನಡೆದ ಘಟನೆಗಳನ್ನು ಸವಿಸ್ತಾರವಾಗಿ ದಾಖಲಿಸಲು ನೆರವಾಗಿದ್ದಾರೆ. ಅವರ ಮಾತುಗಳು ಇಂದಿಗೂ ಈ ಕೃತಿಯನ್ನು ಓದುವಾಗ ಒಂದು ಚಿತ್ರಣವನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿಸುತ್ತವೆ.

ಅದು ಏನೋ ಎಂಬಂತೆ ಸೆರೆಮನೆಯಿಂದ ಗಾಂಧೀಜಿಯ ಬಿಡುಗಡೆ ಆಯಿತು. ಯಾವುದೇ ಮಹತ್ವದ ಕಾರ್ಯವನ್ನು ದೊಡ್ಡವರೇ ಪ್ರಾರಂಭಿಸಬಲ್ಲರು ಮತ್ತು ಅದರಲ್ಲಿ ಬರುವ ಅಡೆತಡೆಗಳನ್ನು ಅವರೇ ನಿವಾರಿಸಬಲ್ಲರು. ಆಗ ಕಾಂಗ್ರೆಸ್ಸಿನಲ್ಲಿ ಉದ್ಭವಿಸಿದ ಮತ ಭೇದವನ್ನು ಗಾಂಧೀಜಿ ಅಲ್ಲದೆ ಮತ್ತಾರು ನಿವಾರಿಸಬಹುದಿತ್ತು? ಇಂಥ ಪರಿಸ್ಥಿತಿಯಲ್ಲಿ ಗಾಂಧೀಜಿ ಅಂಥವರೇ ಕಾಂಗ್ರೆಸಿನ ಅಧ್ಯಕ್ಷರಾಗುವ ಅವಶ್ಯಕತೆ ಇತ್ತು. ಆ ಮೇರೆಗೆ ಗಾಂಧೀಜಿಯೇ 1924ರಲ್ಲಿ ಬೆಳಗಾಂವ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದರು. ಈ ದೃಷ್ಟಿಯಿಂದ, ಬೆಳಗಾಂವ ಕಾಂಗ್ರೆಸ್ಸು ಅಸಹಕಾರದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣವಾದ ಘಟ್ಟವಾಗಿದೆ. ಇದರ ವಿವರ ಮುಂದೆ ಬರುವದು.

ಈ ಸಂದರ್ಭದಲ್ಲಿ ಎಲ್ಲರನ್ನೂ ಗಾಬರಿಗೊಳಿಸುವಂಥ ಒಂದು ಸುದ್ದಿ ಬಂತು. ಪೂನಾದಲ್ಲಿ ಗಾಂಧೀಜಿಗೆ ಅಪೆಂಡಿಸೈಟಿಸ್ ಕರುಳು ರೋಗಕ್ಕೆ ಶಸ್ತ್ರಚಿಕಿತ್ಸೆ ಎಂದು ಸುದ್ದಿ ಬಂದು ಸಸೂನ್ ಆಸ್ಪತ್ರೆಯಲ್ಲಿ ಗಾಂಧೀಜಿಗೆ ಈ ಚಿಕಿತ್ಸೆ ನಡೆಯಿತು. ಕರ್ನಲ್ ಮ್ಯಾಡಾಕ್ ಚಿಕಿತ್ಸೆ ನಡೆಸಿದರು. ಚಿಕಿತ್ಸೆ ನಡೆಯುವ ಹೊತ್ತಿಗೆ ಸರಿಯಾಗಿ ವಿದ್ಯುತ್ ದೀಪ ಆರಿಹೋದವು. ದೊಡ್ಡ ಅಪಶಕುನ. ಒಂದು ಕಂದೀಲಿನ ಬೆಳಕಿನಲ್ಲೇ ಚಿಕಿತ್ಸೆ ಮಾಡಿದರು. ದೇವರ ದಯೆಯಿಂದ ಶಸ್ತ್ರಚಿಕಿತ್ಸೆ ಯಶಸ್ವಿ ಆಯಿತು.

ಈ ಸುದ್ದಿ ಕೇಳಿ ಕಾಂಗ್ರೆಸ್ ಕಾರ್ಯದರ್ಶಿ ಆಗಿದ್ದ ಗಂಗಾಧರರಾಯರು ಪೂನಾಕ್ಕೆ ಓಡಿದರು. ರೈಲಿಳಿದವರೇ ನೆಟ್ಟಗೆ ಗಾಂಧೀಜಿ ಇದ್ದ ಸಸೂನ್ ಆಸ್ಪತ್ರೆಗೆ ಹೋದರು. ಅವರ ಪರಿಸ್ಥಿತಿ, ಅವರ ಆರೋಗ್ಯ ಸುಧಾರಿಸುತ್ತಿದ್ದುದನ್ನು ಕಂಡು ಆನಂದಪಟ್ಟರು . ಗಾಂಧೀಜಿ ಆಗಿನ್ನೂ ಕೈದಿ. ಅವರ ಮೇಲೆ ಪೊಲೀಸರ ಕಾವಲಿತ್ತು. ಆದರೂ ಅವರನ್ನು ಕಾಣಬಯಸುವ ಬಂಧು-ಬಾಂಧವರನ್ನು ಅವರ ಭೆಟ್ಟಿಗೆ ಬಿಡುತ್ತಿದ್ದರು. ಕೆಲವು ದಿನಗಳ ಮೇಲೆ ಅವರ ಆರೋಗ್ಯ ಉತ್ತಮಗೊಂಡಿತು. ಅಲ್ಲಿಯವರೆಗೂ ಪೂನಾದಲ್ಲೇ ಇದ್ದು, ಆಮೇಲೆ ಗಂಗಾಧರರಾಯರು ಊರಿಗೆ ಬಂದರು.

ಗಾಂಧೀಜಿ ಶಿಕ್ಷೆಯ ಅವಧಿಗಿಂತ ಮೊದಲೇ 5-2-1924ರಂದು ಅನಿರ್ಬಂಧ ಬಿಡುಗಡೆ ಹೊಂದಿದರು. ಮತ್ತೊಮ್ಮೆ ಪ್ರಾಂತೀಯ ಸಭೆ ಹುಬ್ಬಳ್ಳಿಯಲ್ಲಿ ನಡೆದು, ಬೆಳಗಾಂವಿಯಲ್ಲೇ ಕಾಂಗ್ರೆಸ್ ನಡೆಯಬೇಕೆಂದು ಹಿಂದಿನ ತೀರ್ಮಾನ ಸ್ಥಿರ ಆಯಿತು. ಸ್ವಾಗತಾಧ್ಯಕ್ಷರಾಗಿ ಗಂಗಾಧರರಾಯರೇ ಆರಿಸಿ ಬಂದರು. ಮಧ್ವರಾವ್ ಕೆಂಭಾವಿ, ಭೀಮರಾವ್ ಪೋತದಾರ್, ಬಾಬಾ ಸಾಹೇಬ್ ಸೋಮಣ್ - ಈ ಮೂವರೂ ಕಾರ್ಯದರ್ಶಿಗಳು.

ಅಧಿವೇಶನದ ಕಾಲಕ್ಕೆ ಸ್ವಯಂಸೇವಕರ ಪಥಕವನ್ನು ಕೂಡಿಸುವ ಕೆಲಸವನ್ನು ಡಾ। ಹರ್ಡೀಕರರ ಹಿಂದೂಸ್ತಾನಿ ಸೇವಾದಲಕ್ಕೆ ಒಪ್ಪಿಸಿದರು. ಕಾಕಿನಾಡಾದ ಕಾಂಗ್ರೆಸ್ಸಿನಲ್ಲೇ ಹಿಂದೂಸ್ತಾನಿ ಸೇವಾದಲ ಜನ್ಮತಾಳಿತ್ತು. ಅದಕ್ಕೂ ಕಾಂಗ್ರೆಸ್ಸಿಗೂ ಒಂದು ನಂಟು ಏರ್ಪಟ್ಟಿತ್ತು. ಸ್ವಾಗತಾಧ್ಯಕ್ಷರಾದ ದೇಶಪಾಂಡೆ ಗಂಗಾಧರರಾಯರ ಆತ್ಮಕಥೆಯಿಂದ ಮುಂದಿನ ಸಂಗತಿಗಳನ್ನು ಎತ್ತಿಕೊಳ್ಳೋಣ.

"ಕಾಂಗ್ರೆಸ್ ಶಿಬಿರದ ರಚನೆ ಮುಂತಾದವನ್ನು ಸಿದ್ಧಗೊಳಿಸುವ ಕೆಲಸವನ್ನು ನಮ್ಮ ಗೆಳೆಯರಾದ ಎ.ಕೃಷ್ಣರಾವ್ ಅವರ ಸಲಹೆಯಿಂದ ಮಾಡಲಾಗಿತ್ತು. ಹೊಸ ವಿಸ್ತರಣಕ್ಕಾಗಿ (ಬೆಳಗಾಂವಿಯ) ಪುರಸಭೆ ಹೊಸ ಬೀದಿಗಳನ್ನು ರಚಿಸಬೇಕಾಗಿತ್ತು. ಕಾಂಗ್ರೆಸ್ ಸೇರುವ ಮೊದಲೇ ಬೀದಿಗಳನ್ನು ಪೂರ್ಣ ರಚಿಸಿಕೊಡುವುದಾಗಿ ಪುರಸಭೆ ಒಪ್ಪಿಕೊಂಡಿತ್ತು. ಈ ಬೀದಿಗಳ ಸಾಲು ಹಿಡಿದೇ ನಮ್ಮ ಶಿಬಿರವನ್ನು ರಚಿಸಿದ್ದೆವು. ಅದರಿಂದ ಬೀದಿ, ಬಚ್ಚಲು, ಇತ್ಯಾದಿಗಳನ್ನು ಕಟ್ಟುವ ಖರ್ಚು ಹೊರಗಿನಿಂದ ಹೊರಗೇ ಹೋಯಿತು. ಬೆಳಗಾವಿಯಲ್ಲಿ ಮಳೆಗಾಲ ಹೆಚ್ಚಾಗಿ ಇರುವುದರಿಂದ ಪ್ರತ್ಯಕ್ಷ ರಚನೆಯ ಕೆಲಸಕ್ಕೆ ತೊಡಗುವುದು ಅಷ್ಟೊಂದು ಸುಲಭ ಅಲ್ಲ. ಆದರೂ ದೊಡ್ಡಗಳ, ಬಿದಿರು, ಕಂಬ - ಇತ್ಯಾದಿ ಅಡವಿಯ ಸಾಮಾನುಗಳು ಹತ್ತಿರದ ಯಾವ ಅಡವಿಯಲ್ಲಿ ಸಿಕ್ಕುತ್ತವೆ ಎಂಬುದನ್ನು ಗೊತ್ತುಮಾಡಿಕೊಂಡು, ದಸರೆಯ ನಂತರ ಅವನ್ನು ಕೂಡಿಸುವ ವ್ಯವಸ್ಥೆ ಮಾಡಿದ್ದೆವು. ಈ ಸಾಮಾನುಗಳನ್ನು ಸಹ ಪೇಟೆಯಲ್ಲಿ ಕೊಂಡುಕೊಳ್ಳದೆ ಅರಣ್ಯದಲ್ಲಿಯೇ ಸುಂಕಕೊಟ್ಟು ನಾವೇ ಕಡಿದು ತರಿಸುವ ವ್ಯವಸ್ಥೆ ಮಾಡಿದ್ದೆವು. ಇದರಿಂದ ಗುತ್ತಿಗೆದಾರರಿಗೆ ಮತ್ತು ವ್ಯಾಪಾರಸ್ಥರಿಗೆ ದೊರೆಯುತ್ತಿದ್ದ ಲಾಭವು ಉಳಿಯಿತು. ಕಾಕಿನಾಡದಲ್ಲಿ ಪ್ರತಿಸಲದಂತೆ ಮಂಟಪವನ್ನು ಹಾಕದೇ ಒಂದು ಡೇರೆಯನ್ನು ನಿಲ್ಲಿಸಿದ್ದರು. ಅದನ್ನೇ ನಾವು ಕೊಂಡುಕೊಂಡೆವು. ಅದರಿಂದ ಮಂಟಪದ ಖರ್ಚಿನಲ್ಲಿ ಸಾಕಷ್ಟು ಉಳಿತಾಯ ಆಯಿತು.

ಈ ರೀತಿ ಪ್ರತಿಯೊಂದು ವಿಷಯದಲ್ಲಿಯೂ ಕೈಬಿಗಿಹಿಡಿದು ವೆಚ್ಚಮಾಡುವ ಧೋರಣೆಯನ್ನು ಮೊದಲಿನಿಂದಲೇ ನಿಶ್ಚಯಿಸಿದ್ದೆವು . ಕರ್ನಾಟಕದಲ್ಲಿಯ ಜನರು ಉದಾರ ಹಸ್ತದಿಂದ ಸಹಾಯಮಾಡಿ ಕಾಂಗ್ರೆಸ್ಸನ್ನು ಯಶಸ್ವಿಯಾಗಿ ಮಾಡುತ್ತಾರೆಂದು ನನ್ನ ನಂಬಿಕೆ ಇತ್ತು. ಅದಕ್ಕಾಗಿ ಮೇಲಿಂದ ಮೇಲೆ ಅವರ ಬೆನ್ನು ಹತ್ತುವುದು ಅವಶ್ಯ ಇತ್ತು. ಆದುದರಿಂದ ಆದಷ್ಟು ಬೇಗ ಸ್ವಾಗತಸಮಿತಿಯ ಸದಸ್ಯರಾಗಿ ಕಾಂಗ್ರೆಸಿಗೆ ಆರ್ಥಿಕ ಸಹಾಯ ಮಾಡಬೇಕೆಂದು ಒಂದು ಬಿನ್ನಹ ಪತ್ರವನ್ನು ಪತ್ರಿಕೆಗಳಲ್ಲಿ ನಾನು ಪ್ರಸಿದ್ಧ ಮಾಡಿದೆನು. ಅದನ್ನು ವಲ್ಲಭಭಾಯಿಯವರು ನೋಡಿದರು. ನನಗೆ ಹಣದ ಕೊರತೆ ಬಹಳ ಇದೆಯೆಂದು ತಿಳಿದು ಏನಾದರೂ ಸಹಾಯ ಮಾಡಬೇಕೇ ಎಂದು ಅವರು ನನ್ನನ್ನು ವಿಚಾರಿಸಿದರು. ಆದರೆ ಹೊರಗಿನಿಂದ ಸಹಾಯ ತೆಗೆದುಕೊಳ್ಳುವ ಪರಿಸ್ಥಿತಿ ಇಲ್ಲವೆಂದು ನಾನು ಅವರಿಗೆ ತಿಳಿಸಿದೆನು."

ಗಾಂಧೀಜಿ - ಬೆಳಗಾವಿ ಕಾಂಗ್ರೆಸ್ಸಿನ ಅಧ್ಯಕ್ಷರು

ಈ ನಡುವೆ ಭಾರತದ ಹಿಂದೂ-ಮುಸಲ್ಮಾನರಲ್ಲಿ ಪರಸ್ಪರ ತಿಳಿವಳಿಕೆ ಕಡಿಮೆ ಆಗಿ, ವೈಷಮ್ಯ ಹೆಚ್ಚು ಆಗಿ ಅಲ್ಲಲ್ಲಿ ದಂಗೆ - ದೊಂಬಿಗಳಾಗಿದ್ದವು. ಇದನ್ನು ವಿವರವಾಗಿ ಕೂಲಂಕಷವಾಗಿ ತಿಳಿದುಕೊಳ್ಳಲು ಗಾಂಧೀಜಿ ಮತ್ತು ಶೌಕತ್ ಆಲಿ ದೇಶಾದ್ಯಂತ ಒಟ್ಟಿಗೆ ಪ್ರವಾಸ ಮಾಡಿದರು. ಆದರೂ ಹಿಂದೂ - ಮುಸಲ್ಮಾನರ ಸಂಬಂಧ ಸರಿಹೋಗಲಿಲ್ಲ. ಇಷ್ಟೆಲ್ಲ ಕಾರಣಗಳಿಂದ ಗಾಂಧೀಜಿ ಸೆಪ್ಟೆಂಬರಿನಲ್ಲಿ 21 ದಿನ ಉಪವಾಸ ಮಾಡಲು ತೀರ್ಮಾನಿಸಿದರು. ದಿಲ್ಲಿಯಲ್ಲಿ ಆಗ ಅವರು ಮಹಮ್ಮದಲಿಯ ಮನೆಯಲ್ಲಿ ಇಳಿದುಕೊಂಡಿದ್ದರು. ಅಲ್ಲಿಯೇ ನಡೆಯಿತು ಈ ಐಕ್ಯತೆಯ ಉಪವಾಸ. ಆ ಸಂದರ್ಭದಲ್ಲಿ ಒಂದು ಸರ್ವಪಕ್ಷ ಸಮ್ಮೇಳನ ದಿಲ್ಲಿಯಲ್ಲಿ ನಡೆಯಿತು. ಎಲ್ಲ ಪಕ್ಷದವರೂ ಎಲ್ಲ ಪ್ರಸಿದ್ಧ ವ್ಯಕ್ತಿಗಳು ಅಲ್ಲಿಗೆ ಬಂದಿದ್ದರು. ಆ ಸಮ್ಮೇಳನವನ್ನು Unity Conference ಅಥವಾ " ಐಕ್ಯತಾ ಸಮ್ಮೇಳನ " ಎಂದು ಕರೆದರು.

ಕರ್ನಾಟಕವೂ ಅದರಲ್ಲಿ ಪಾಲುಗೊಂಡಿತ್ತು. ಇಲ್ಲಿಂದ ಕರ್ನಾಟಕದ ಪರವಾಗಿ ಗಂಗಾಧರ ರಾಯರು ಹೋಗಿದ್ದರು . ಅದರಲ್ಲಿ ಐಕ್ಯತೆಯ ತೀರ್ಮಾನ ಆಯಿತು.

ಅಲ್ಲಿಂದ ಮುಂದೆ ಅಹಮದಾಬಾದಿಗೆ ಬಂದರು ಗಾಂಧೀಜಿ. ಅಲ್ಲಿ ಅಖಿಲಭಾರತ ಚರಖಾ ಸಂಘದ ಸಭೆ. ಕರ್ನಾಟಕದಲ್ಲಿ ಚರಖಾ ಸಂಘದ ಪ್ರತಿನಿಧಿ ಆಗಿದ್ದ ಗಂಗಾಧರರಾಯರೂ ಆ ಸಭೆಗೆ ಹೋಗಿದ್ದರು. ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನಕ್ಕೆ ತಾವು ಅಧ್ಯಕ್ಷರು ಆಗಬೇಕು ಎಂದು ಗಾಂಧೀಜಿಯನ್ನು ಗಂಗಾಧರರಾಯರು ಕೇಳಿಕೊಂಡರು. ಆ ವೇಳೆಗೆ ಆಗಲೇ ಎಲ್ಲ ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಗಳೂ ಗಾಂಧೀಜಿಯ ಹೆಸರನ್ನೇ ಸೂಚಿಸಿದ್ದವು. ಗಾಂಧೀಜಿ ಮಾತ್ರ ಆಗ ಈ ಸೂಚನೆಗೆ ಒಪ್ಪಿರಲಿಲ್ಲ. ಮುಂದೆ ತಿಳಿಸುತ್ತೇನೆ ಯೋಚಿಸಿ ಎಂದು ಹೇಳಿಬಿಟ್ಟರು. ಇದು ನಡೆದ ಕೆಲವು ದಿನಗಳಲ್ಲಿಯೇ ಬೊಂಬಾಯಿಯಲ್ಲಿ ಒಂದು ಸರ್ವಪಕ್ಷೀಯ ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಬಹಳ ಮಟ್ಟಿಗೆ ಏಕವಾಕ್ಯತೆ ಕಂಡುಬಂತು ರಾಜಕಾರಣಿಗಳಲ್ಲಿ. ಆದ್ದರಿಂದ ಗಾಂಧೀಜಿ ಕರ್ನಾಟಕದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಲು ಒಪ್ಪಿದರು . ಅವರು ಅಲ್ಲದೆ ಬೇರೆ ಯಾರೂ ಆಗ ಕಾಂಗ್ರೆಸ್ ಅಧ್ಯಕ್ಷ ಪೀಠವನ್ನು ಏರಿ, ದೇಶದಲ್ಲಿ ಐಕಮತ್ಯವನ್ನು ಸಾಧಿಸಲು ಸಾಧ್ಯ ಇರಲಿಲ್ಲ.

ಇದರಿಂದ ಕರ್ನಾಟಕದ ಜನರಲ್ಲಿ ಹುರುಪು ಹೆಚ್ಚಾಗಿ ಬಂದು ಬೇಗ ಬೇಗ ಕೆಲಸ ನಡೆಯುವಂತೆ ಆಯಿತು. ಬೆಳಗಾಂವಿ, ಧಾರವಾಡ, ಬಳ್ಳಾರಿ, ಕಾರವಾರ ಜಿಲ್ಲೆಗಳಿಂದ ಸಾಕಷ್ಟು ಧನಸಹಾಯವೂ ದೊರೆಯಿತು. ಆಗ ಮೈಸೂರು ದೇಶೀ ಸಂಸ್ಥಾನ. ಇಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯಕಲಾಪಗಳು ನಡೆಯುವಂತಿರಲಿಲ್ಲ. ಸ್ವಯಂ ಗಾಂಧೀಜಿಯ ಅದಕ್ಕೆವಿರುದ್ಧ . ಸಂಸ್ಥಾನದ ಜನ ಹೊರಗಿನ ಬ್ರಿಟಿಷ್ ಪ್ರಾಂತಗಳ ಪ್ರಾಂತೀಯ ಕಾಂಗ್ರೆಸಿನ ಸದಸ್ಯರಾಗಿ ಅಲ್ಲಿನ ಚಳವಳಿಗಳಲ್ಲಿ ಭಾಗವಹಿಸಬೇಕಾಗಿತ್ತು. ಇಲ್ಲಿನ ಉತ್ಸಾಹೀ ತರುಣರು ಅದೇ ದಾರಿ ಹಿಡಿದರು. ನಾಗಪುರದಲ್ಲಿ ನಡೆದ ಧ್ವಜಸತ್ಯಾಗಹಕ್ಕೆ (1–5–1923), ಕರ್ನಾಟಕದಿಂದ ಅನೇಕ ಮಂದಿ ಕಾರ್ಯಕರ್ತರು ಹೋಗಿದ್ದರು. ಅವರಲ್ಲಿ ಪ್ರಮುಖರು ಡಾ। ಹರ್ಡೀಕರರು, ಶ್ರೀನಿವಾಸರಾವ ಜೋಗ ಇವರು. ಧಾರವಾಡ, ಬೆಂಗಳೂರು ಮುಂತಾದ ಕಡೆಗಳಿಂದ ಹಲವಾರು ಕಾರ್ಯಕರ್ತರು ಆ ಸತ್ಯಾಗ್ರಹಕ್ಕೆ ಹೋಗಿದ್ದರು. ನಾಗಪುರದ ಸಿವಿಲ್ ಲೈನಿನಲ್ಲಿ ಕಾಂಗ್ರೆಸ್ ಧ್ವಜ ಹಿಡಿದುಕೊಂಡು ನಡೆಯಬಾರದು ಎಂದು ಪ್ರತಿಬಂಧಕ ಆದೇಶವನ್ನು ಹೊರಡಿಸಿತ್ತು ಅಂದಿನ ಸರಕಾರ. ಆ ಕಾರಣದಿಂದ ಅಲ್ಲಿ ಸತ್ಯಾಗ್ರಹ ಪ್ರಾರಂಭವಾಗಿತ್ತು. ಸ್ವರ್ಗೀಯ ಸೇಠ ಜಮುನಾಲಾಲ ಬಜಾಜರು ಆ ಸತ್ಯಾಗ್ರಹಕ್ಕೆ ಮುಂದಾಳು. ಅವರು ಸೆರೆ ಆದಮೇಲೆ ವಲ್ಲಭಭಾಯಿಯವರೇ ಅದಕ್ಕೆ ಚಾಲನೆ ನೀಡಿದರು . ಅತ್ತ ನಾಗಪುರದಲ್ಲಿ ಜುಲೈ 18, 1923ಕ್ಕೆ ಜಂಡಾ ಸತ್ಯಾಗ್ರಹ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಆಗ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಈಸಾ ಮಹಮ್ಮದಲಿ ಬಿಜಾಪುರ ಜೈಲಿನಲ್ಲಿದ್ದರು. ಅವರ ಬಿಡುಗಡೆಯಾಗಿ ಶ್ರೀನಿವಾಸರಾಯರು ಹೊರಗೆ ಹೊರಗೆ ಬಂದ ಮೇಲೆ ಬಿಜಾಪುರದಲ್ಲಿ ಪ್ರಾಂತೀಯ ಪರಿಷತ್ತು ನಡೆಯಿತು. ಅದಕ್ಕೆ ಶ್ರೀ ಶ್ರೀನಿವಾಸರಾವ ಕೌಜಲಗಿಯವರೇ ಸ್ವಾಗತ ಅಧ್ಯಕ್ಷರಾದರು .ಅಧ್ಯಕ್ಷರು ಚಕ್ರವರ್ತಿ ಮಾಸಾ.

1924 ಡಿಸೆಂಬರ್‌ನಲ್ಲಿ ಬೆಳಗಾಂವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಕಾಂಗ್ರೆಸಿನ ಇತಿಹಾಸ ಬರೆದ ಸುಪ್ರಸಿದ್ಧ ಇತಿಹಾಸಜ್ಞ, ಲೇಖಕ, ವಿಮರ್ಶಕ. ಕಾಂಗ್ರೆಸ್ ಅಧ್ಯಕ್ಷರಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರು ತಮ್ಮ " ರಾಷ್ಟ್ರೀಯ ಕಾಂಗ್ರೆಸಿನ ಇತಿಹಾಸ " ಎಂಬ ಪುಸ್ತಕದಲ್ಲಿ ಬೆಳಗಾಂವಿಯ ಕಾಂಗ್ರೆಸ್ ಬಗ್ಗೆ ಹೀಗೆ ಬರೆದಿದ್ದಾರೆ:

"ಅಸಹಕಾರದ ಇತಿಹಾಸದಲ್ಲಿ ಬೆಳಗಾಂವಿಯ ಕಾಂಗ್ರೆಸ್ ಒಂದು



ಮುಖ್ಯ ಘಟ್ಟ, ಗಾಂಧೀವಾದದ ಬಹಿಷ್ಕಾರ ಪದ್ಧತಿ ವಿರುದ್ಧ ಎದ್ದಿದ್ದ ಬಂಡು ಅಲ್ಲಿನ ಕಾಂಗ್ರೆಸ್ ಎರಡು ಬಣ ಕವಲು ಒಡೆಯುವಂತೆ ಇತ್ತು. ಕಾಂಗ್ರೆಸಿಗರು ಹೀಗೆ ಎರಡು ಗುಂಪು ಆಗಿ ಪರಸ್ಪರ ವಿರುದ್ಧ ನಿಲ್ಲಬೇಕೆ ಅಥವಾ ಏನಾದರೂ ಒಪ್ಪಂದ ಮಾಡಿಕೊಂಡು, ತಮ್ಮ ಭೇದಗಳನ್ನು ಪಕ್ಕಕ್ಕೆ ಸರಿಸಬೇಕೇ?" ಹಾಗೆ ಒಪ್ಪಂದ ಮಾಡಿಸಬೇಕು ಎಂದರೆ ಅಂಥ ಒಪ್ಪಂದವನ್ನು ಮಾಡಿಸಬಲ್ಲ ಸಮರ್ಥರು ಗಾಂಧೀಜಿ ಒಬ್ಬರೇ – ಬೇರೆ ಯಾರೂ ಇರಲಿಲ್ಲ. ಅವರಿಗಿಂತ ಸಮರ್ಥರು ಯಾರು ಈ ಕೆಲಸಕ್ಕೆ ಇತ್ತ ಸವಿನಯ ಶಾಸನಭಂಗವನ್ನು ನಿಲ್ಲಿಸಲೂ ಬೇಕು, ಅತ್ತ ಸತ್ಯಾಗ್ರಹಿ ಅನುಯಾಯಿಗಳಿಗೆ ಮನಸ್ಸು ಕಹಿ ಆಗಲೂಬಾರದು. ಇದನ್ನು ಮಾಡಲು ಕೇವಲ ಗಾಂಧೀಜಿಗೆ ಮಾತ್ರವೇ ಸಾಧ್ಯ. ಶಾಸನಸಭಾ ಪ್ರವೇಶವನ್ನು ವಿರೋಧಿಸಲೂ ಬೇಕು. ಆದರೆ ಸ್ವರಾಜ್ಯ ಪಕ್ಷಕ್ಕೆ ಸ್ವಲ್ಪವೂ ಗಾಸಿ ಆಗಲೂಬಾರದು. ಯಾವುದಾದರೂ ಮಹಾ ಕಾರ್ಯಕ್ರಮವನ್ನು ಪ್ರಾರಂಭಿಸಲು ಮಹಾಪುರುಷರೇ ಬೇಕು. ಅಂಥ ಮಹಾಕಾರ್ಯಕ್ರಮವನ್ನು ಉಪಸಂಹರಿಸಲೂ ಮಹಾಪುರುಷರೇ ಬೇಕು. ಬೇರೆ ಯಾರಿಗೂ ಸಾಧ್ಯ ಅಲ್ಲ. ಆದ್ದರಿಂದ ಬೆಳಗಾಂವಿ ಕಾಂಗ್ರೆಸ್ಸಿಗೇ ಗಾಂಧೀಜಿ ಅಧ್ಯಕ್ಷರಾದುದು ಆ ಕಾಲದ ದೃಷ್ಟಿಯಿಂದ ಅತ್ಯಂತ ಯೋಗ್ಯ."

"ಬೆಳಗಾವಿಯ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯ ಅಧ್ಯಕ್ಷ ಭಾಷಣ ಪುಟ್ಟದು. ಅದನ್ನು ಸಭೆಗೆ ಮೊದಲೇ ಹಂಚಿಬಿಟ್ಟರು. ಅದರ ಸಾರಾಂಶವನ್ನು ಮಾತ್ರ ಬಾಯಲ್ಲಿ ಹೇಳಿದರು ಗಾಂಧೀಜಿ. ಸುಮಾರು ಅರ್ಧ ಘಂಟೆ ಹಿಡಿಸಿತು ಅಧ್ಯಕ್ಷ ಭಾಷಣಕ್ಕೆ. ಸ್ವಾಗತಾಧ್ಯಕ್ಷರಾದ ಗಂಗಾಧರರಾಯರಿಗೂ ಗಾಂಧೀಜಿ ಮೊದಲೇ ತಿಳಿಸಿದ್ದರು. ಅದರಂತೆ ಅವರ ಭಾಷಣವೂ ಹತ್ತೇ ನಿಮಿಷದಲ್ಲಿ ಮುಗಿಯಿತು. ಮೊದಲೆ ಪ್ರಕಟಿಸಿದ್ದಂತೆ ಕಾರ್ಯಕ್ರಮಗಳು ಕ್ಲುಪ್ತಕಾಲಕ್ಕೆ ಸರಿಯಾಗಿ ನೆರವೇರಿದವು. ಕಾಲಕ್ಲುಪ್ತತೆಯನ್ನು ಬೆಳಗಾವಿಯಲ್ಲಿ ಅಪೂರ್ವ ರೀತಿಯಲ್ಲಿ ಸಾಧಿಸಲಾಯಿತು.

ಅಪರಿವರ್ತನವಾದಿಗಳ ಸಭೆ

ಬೆಳಗಾವಿಯಲ್ಲಿ ಅಪರಿವರ್ತನವಾದಿಗಳ ಸಭೆ ಒಂದು ನಡೆಯಿತು. ಚರ್ಚೆ ನಡೆದವು. ಗಾಂಧೀಜಿಯ ಭಾಷಣ ಬಹಳ

ಹೃದಯಸ್ಪರ್ಶಿ ಆಗಿತ್ತು. ಸ್ವತಃ ಸ್ವಭಾವದಿಂದ ಅವರು ಯಾವತ್ತೂ ಅಪರಿವರ್ತನವಾದಿಗಳೆ; ಶಾಸನ ಸಭೆಗಳಲ್ಲಿ ತಮಗೆ ರುಚಿ ಇಲ್ಲ ಎಂದರು. ಅದಕ್ಕೆ ಬದಲು ಅಷ್ಟೇ ಹುರುಪಿನ ಕಾರ್ಯಕ್ರಮ ಎಂದರೆ ಚರಖಾ, ಹಿಂದೂ ಮುಸ್ಲಿಂ ಐಕ್ಯ, ಅಸ್ಪೃಶ್ಯತಾ ನಿವಾರಣೆ : ಎನ್ನಬೇಕು. ದೇಶಕ್ಕೆ ಉಪಯುಕ್ತವಾದ ಇನ್ನೂ ಎಷ್ಟೋ ಕಾರ್ಯಕ್ರಮಗಳನ್ನು ತಾವು ಗಮನಿಸ ಬೇಕು . ಎಲ್ಲವೂ ಸ್ವರಾಜ್ಯಕ್ಕೆ ಅನಿವಾರ್ಯ ಅಲ್ಲ. ಅದ್ದರಿಂದಲೇ ಚರಖಾ ಪ್ರಚಾರವನ್ನು ತಾವು ಕೈಗೊಂಡದ್ದು. ಇದನ್ನು ಮೇಲು – ಕೀಳು ; ಹಳ್ಳಿ – ಪಟ್ಟಣ ಎಂಬ ಭೇದವಿಲ್ಲದೆ ಒಬ್ಬೊಬ್ಬರೂ ಒಂಟಿಯಾಗಿ ಮಾಡಬಹುದು. ಆದ್ದರಿಂದ ಅದು ಅವರ ಈ ವರ್ಷದ ಕಾರ್ಯಕ್ರಮದ ಕಮಾನಿಗೆ ನಡುಗಲ್ಲು ಇದ್ದಂತೆ. ಚರಖಾ ಕಾರ್ಯಕ್ರಮ ಅಪಾರವಾಗಿ ನಡೆಯದೇ ಈ ವರ್ಷದಲ್ಲಿ ಪರದೇಶಿ ವಸ್ತ್ರ ಬಹಿಷ್ಕಾರ ಸಂಪೂರ್ಣವಾಗಿ ನಡೆಯುವುದಿಲ್ಲ; ಕಾಂಗ್ರೆಸ್ಸು ನೂಲುವ ಮತದಾನವನ್ನು ಅಂಗೀಕರಿಸಿದರೆ ವರ್ಷವೆಲ್ಲ ಅದನ್ನು ಶ್ರದ್ಧೆಯಿಂದ ನಡೆಸಬೇಕು. ಅದನ್ನು ಒಪ್ಪಿಕೊಂಡು, ಅದಕ್ಕೆ ಮತಕೊಟ್ಟು ಅದರಂತೆ ನಡೆಯದೆ ಇದ್ದರೆ ತಮಗೆ ಹೃದಯಘಾತವಾಗುತ್ತದೆ ಎಂದರು .

ಹೊಸ ಕಾರ್ಯಕ್ರಮ

ಹೊಸ ಕಾರ್ಯಕ್ರಮ ಒಂದು ಬಂದಿತ್ತು. ಬ್ರಿಟಿಷ್ ಸರಕಾರದೊಂದಿಗೆ ಒಂದು ಹೊಸ ಬಗೆಯ ಹೋರಾಟ ನಡೆಸಬೇಕೆಂದು ಗಾಂಧೀಜಿಯವರ ಮನಸ್ಸಿನಲ್ಲಿತ್ತು. ಆದರೆ ಪರದೇಶಿ ವಸ್ತ್ರಬಹಿಷ್ಕಾರ ಸಂಪೂರ್ಣವಾಗಿ ಆಗದೆ ಅದು ಯಶಸ್ವಿಯಾಗುವಂತಿರಲಿಲ್ಲ. ಅಪರಿವರ್ತನ ವಾದಿಗಳು ತಮ್ಮ ಶಕ್ತಿಯನ್ನೆಲ್ಲ ಹಾಕಿ ಬರುವ ವರ್ಷ ಶ್ರದ್ಧೆಯಿಂದ ಚರಖಾ ಕಾರ್ಯಕ್ರಮವನ್ನು ನಡೆಸದೆ ಇದ್ದರೆ ತಮಗೆ ಹೃದಯಕ್ಕೆ ವಜ್ರಾಘಾತವಾಗುತ್ತದೆ. ಮುಂದಿನ ಕಾರ್ಯಕ್ರಮ ಬಾರ್ಡೋಲಿಯ ಕಾರ್ಯಕ್ರಮಕ್ಕಿಂತ ಭಿನ್ನ ಈ ಹೊಸ ಕಾರ್ಯಕ್ರಮ ಏನೆಂಬುದನ್ನು ಈಗಲೇ ತಿಳಿಸುವುದಿಲ್ಲ. ಆದರೆ ವಿದೇಶೀ ವಸ್ತ್ರ ಬಹಿಷ್ಕಾರದ ಈ ಕಾರ್ಯಕ್ರಮ ಸಫಲಗೊಂಡರೆ, ದೇಶದಲ್ಲಿ ಏನೇ ನಡೆಯುತ್ತಿರಲಿ, ಈ ಹೊಸ ಚರಕಾ ಆಚರಣೆಗೆ ಬರುತ್ತದೆ, ಅದಕ್ಕೆ ಮುಖ್ಯ ಆಧಾರ ಪರದೇಶಿ ವಸ್ತ್ರ ಬಹಿಷ್ಕಾರ – ಎಂದರು.

ಬಿನ್ನವತ್ತಳೆಗಳಿಗೆ ಗಾಂಧೀಜಿಯ ಉತ್ತರ

ಅವತ್ತೇ ಬೆಳಗಾವಿಯ ಪೌರಸಭೆ ಮತ್ತು ಜಿಲ್ಲಾ ಬೋರ್ಡುಗಳು ಗಾಂಧೀಜಿಗೆ ಬಿನ್ನವತ್ತಳೆಗಳನ್ನು ಅರ್ಪಿಸಿದವು. ಅದಕ್ಕೆ ಉತ್ತರ ಕೊಡುತ್ತ ತಾವು ಬೆಳಗಾವಿಗೆ ಏನೂ ಸೇವೆ ಸಲ್ಲಿಸದೆ ಇದ್ದುದರಿಂದ ಅದರಲ್ಲಿ ಇದ್ದ ಪ್ರಶಂಸೆಯೆಲ್ಲ ತಮಗೆ ಸಲ್ಲಬೇಕಾದ್ದಲ್ಲ ಎಂದರು. ಪ್ರಸ್ತುತ ಪರಿಸ್ಥಿತಿಯಲ್ಲಿ ಭಾರತದ ಎಲ್ಲ ಪೌರಸಭೆಗಳೂ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಬೇಕು; ಆದರೆ ಪ್ರಾಥಮಿಕ ಕರ್ತವ್ಯ ಆದ ನೈರ್ಮಲ್ಯ–ಸಫಾಯಿಗಳನ್ನು ಬಿಡಬಾರದು ಎಂದರು. ಪಾಶ್ಚಾತ್ಯ ನಾಗರಿಕತೆಯ ಇಷ್ಟ ತಮಗೆ ಇಲ್ಲವಾದರೂ ಸಫಾಯಿಯ ಬಗ್ಗೆ ಅವರಿಂದ ಕಲಿಯಬೇಕಾದ್ದು ಬಹಳ ಇದೆ ಎಂದರು. ಭಾರತ ಬೇಸಾಯದ ದೇಶ. ಈ ದೇಶದ ಪಟ್ಟಣಗಳಲ್ಲಿ ಪ್ಲೇಗು ಮುಂತಾದ ಪಿಡುಗುಗಳು ಹರಡಬಾರದು. ಈ ಪಿಡಗು ದೈವದತ್ತ ಎಂದು ಹೇಳುವುದನ್ನು ಕೇಳಿ ತಮಗೆ ಬಹಳ ದುಃಖ. ತಾವು ದೇವರಲ್ಲಿ ನಂಬಿಕೆ ಇಟ್ಟಿದ್ದರೂ ಮಾನವ ಸಂಕಟವನ್ನು ಮನುಷ್ಯ ಪ್ರಯತ್ನದಿಂದ ನಿವಾರಿಸಿಕೊಳ್ಳಬಹುದಾದ ಅವಕಾಶವೇ ಅಪಾರ. ನಾವೇ ದೈವೀ ನಿಯಮವನ್ನು ಪ್ರಕೃತಿ ನಿಯಮವನ್ನು ಮೀರಿ, ಈ ಪಿಡುಗು ದೈವದತ್ತ ಎನ್ನುವುದು ಆಭಾಸ. ಬೇರೆ ಬೇರೆ ಜಾತಿಗಳಲ್ಲಿ ಇದ್ದ ಸೌಹಾರ್ದವನ್ನು ನೋಡಿ ತಮಗೆ ಸಂತೋಷ. ಇವು ಹೀಗೆ ಇರಲಿ. ಇದರ ಜೊತೆಗೇ ಅಸ್ಪೃಶ್ಯರನ್ನು ಒಳಗೊಳ್ಳ ಬೇಕು ಎಂದರು.

ಒಪ್ಪಂದದ ಪ್ರಸ್ತಾಪ

ವಿಷಯ ನಿಯಾಮಕ ಸಮಿತಿಯಲ್ಲಿ ಡಿಸೆಂಬರ್ 23ರ ದಿನ ಯಾವ ವಿಷಯದಲ್ಲಿಯೂ ಸಭೆಯನ್ನು ಇಬ್ಭಾಗ ಮಾಡುವುದು ತಮಗೆ ಇಷ್ಟವಿಲ್ಲ ಎಂದರು ಗಾಂಧೀಜಿ. ಸ್ವರಾಜ್ಯ ಪಕ್ಷದ ಮುಖಂಡರ ಸಂಗಡ ಒಂದು ಸಂಧಾನ ಮಾಡಿಕೊಂಡು ಅದನ್ನು ಸ್ವೀಕರಿಸಿ ಎಂದು ಕೇಳಿಕೊಂಡರು .ಹಿಂದಿನ ಅ.ಭಾ. ಕಾಂಗ್ರೆಸ್ ಸಮಿತಿಯ ಕಾಲದಿಂದ ಇಲ್ಲಿಯವರೆಗೆ ನಡೆದುದು ಎಲ್ಲವನ್ನೂ ತಾವು ನೋಡಿದ್ದೇವೆ. ಈ ಹೆಜ್ಜೆ ಆತ್ಮಹತ್ಯೆಯ ಹೆಜ್ಜೆ. ಈ ನೂಲುವ ಮತದಾನದಿಂದ ಕಾಂಗ್ರೆಸ್ಸಿನಲ್ಲಿ ನೂರಕ್ಕೆ ತೊಂಬತ್ತು ಜನ ವಿರುದ್ಧವಾಗಿರುವ ಈ ಮತದಾನ ಪದ್ಧತಿಯನ್ನು ಎಲ್ಲರೂ ವಿರೋಧಿಸುವ ಲಕ್ಷಣ ಇದೆಯೆಂದು ವಿಠ್ಠಲಭಾಯಿ ಪಟೇಲರು ಗಾಂಧೀಜಿಗೆ ಹೇಳಿದ್ದರು. ಈಗಾಗಲೇ ಕಾಂಗ್ರೆಸ್ ಸಮಿತಿ ಸಿಂಧ್ ,ಮಧ್ಯಪ್ರಾಂತ ಸಮಿತಿಗಳು ಅದನ್ನು ಒಪ್ಪಿಕೊಂಡಿದ್ದವು. ಆದರೂ ಸಭೆಗೆ ಬೇಡ ಎನಿಸಿದರೆ ಇದನ್ನು ಒಪ್ಪದೇ ಬಿಡಬಹುದು ಎಂದರು ಗಾಂಧೀಜಿ.

ಆದರೆ ನನ್ನನ್ನು ಸಂತೋಷ ಪಡಿಸಲು ಮಾತ್ರ ಈ ಬದಲಾವಣೆಯನ್ನು ಒಪ್ಪಿಕೊಳ್ಳಬೇಡಿ. ನಿಮ್ಮ ಮನಬಂದಂತೆ ಮತಕೊಡಿ. ನಿಮ್ಮ ಮನಸಿಗೆ ಎಷ್ಟೇ ದೊಡ್ಡವರು ಎಂದು ತೋಚಿದರೂ, ಅವರು ಎಷ್ಟೇ ಸೇವೆ ಮಾಡಿದ್ದರೂ ಒಬ್ಬ ಮನುಷ್ಯನ ಅಭಿಪ್ರಾಯಕ್ಕೆ ಬೆಲೆ ಕಡಿಮೆ.

ಶ್ರೀ ಚಿತ್ತರಂಜನದಾಸರು ನನಗೆ ಬರೆದಿದ್ದಾರೆ. ಸ್ವರಾಜ್ಯ ಪಕ್ಷದವರು ಒಪ್ಪಂದದ ಬಗ್ಗೆ ಯಾವ ವಿರೋಧವನ್ನೂ ತೋರಿಸುತ್ತಿಲ್ಲ; ವಿಠ್ಠಲಭಾಯಿ ಪಟೇಲರ ಅಭಿಪ್ರಾಯ ಅವರ ಸ್ವಂತದ್ದು . ಸ್ವರಾಜ್ಯ ಪಕ್ಷದ ಬಹುಮತದ ತೀರ್ಮಾನದಂತೆ ಎಲ್ಲರೂ ನಡೆಯಲೇಬೇಕು, ನಡೆಯುತ್ತಾರೆ. ಈ ಮಾತನ್ನು ಕೇಳಿದಾಗ ತಮಗೆಷ್ಟೋ ಸಮಾಧಾನ ಆಯಿತೆಂದರು ಗಾಂಧೀಜಿ. ಆದರೆ ಒಪ್ಪಂದ ಒಪ್ಪಿಗೆ ಆಗದಿದ್ದವರನ್ನು ಹೀಗೆ ಬಂಧಿಸುವದು ಬೇಡ ಎಂದು ದಾಸರನ್ನು ಕೇಳಿಕೊಳ್ಳುತ್ತೇನೆ. ಇದು ಬರೀ ಕಾಗದದ ಒಪ್ಪಂದವಾಗಬಾರದು . ಇದರ ಅರ್ಥ; ನಿರಂತರಕಾರ್ಯ, ಕಠಿಣಶಿಸ್ತಿಗೆ ಆಹ್ವಾನ. ಇದಕ್ಕೆ ಒಪ್ಪಿಕೊಂಡವರು ಪ್ರತಿಯೊಬ್ಬರೂ ತಾವೇ ನೂತ 2 ಸಾವಿರ ಗಜ ನೂಲನ್ನು ಕಳುಹಿಸಬೇಕಾಗುತ್ತದೆ. ನೂಲಲು ಆಗದಿದ್ದವರು ಅಥವಾ ಇಷ್ಟವಿಲ್ಲದಿದ್ದವರು ಇತರರಿಂದ ನೂಲಿಸಿ ಕಳುಹಿಸಬಹುದು. ಆದರೆ ಅವರು ಅದರ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳಬೇಕು. ಇದನ್ನು ಪೂರ್ತಿ ಅರ್ಥಮಾಡಿಕೊಂಡು, ಸಭೆ ಒಪ್ಪಿಗೆ ಕೊಡಬೇಕು ಎಂದರು.

'ಅಪರಿವರ್ತನವಾದಿಗಳ ಸಭೆಯಲ್ಲಿ ಸ್ವರಾಜ್ಯ ಪಕ್ಷಕ್ಕೆ ಒಂದು ಮತದಾನ ಪದ್ಧತಿ, ಕಾಂಗ್ರೆಸಿಗೆ ಒಂದು ಮತದಾನ ಪದ್ಧತಿ ಇರಬಹುದೇ ಎಂಬ ಪ್ರಶ್ನೆ ಬಂದು ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಕಾಂಗ್ರೆಸ್ ನಿಯಮಗಳಿಗೆ ತಕ್ಕಹಾಗೆ ಸ್ವರಾಜ್ಯ ಪಕ್ಷದ ಅಂಗರಚನೆಯನ್ನು ತಿದ್ದಲು ಯೋಚಿಸಿದ್ದೇವೆ ಎಂದರು. ಅವರೂ ತಮ್ಮಂತೆಯೇ ಅಂಗರಚನೆಯನ್ನು ಮಾಡಿಕೊಳ್ಳುವರೆಂದು ತಿಳಿದು ಅಪರಿವರ್ತನವಾದಿಗಳು ಈ ಒಪ್ಪಂದವನ್ನು ಒಪ್ಪಿಕೊಂಡರು.

■



ರಾಷ್ಟ್ರಪಿತ ದಿವಂಗತ; ಅದೃಷ್ಟಹೀನ ಭಾರತ

ರಾಷ್ಟ್ರಪಿತ ದಿವಂಗತ
ಉನ್ಮತ್ತ ಹಸ್ತ ಹತ!
ನರಹೃದಯದ ವಿಷವಾರ್ಧಿಗೆ
ಜೀವಾಮೃತ ಸಮರ್ಪಿತಃ
ಕ್ಷಮಿಸು ಓ ಜಗತ್ ಪಿತಃ
ಅದೃಷ್ಟಹೀನ ಭಾರತ!

ನಮ್ಮ ರಾಷ್ಟ್ರದ ಪಿತಾಮಹನು ರಣರಂಗದ ಮಧ್ಯೆ ಶರಶಯ್ಯೆಯಲ್ಲಿ ಅಸ್ತಂಗತನಾದನು. ನಮ್ಮ ಸಾಕ್ರೆಟೀಸನಿಗೆ ವಿಷಪಾನ ಮಾಡಿಸಿಯಾಯಿತು. ನಮ್ಮ ಯೇಸುಕ್ರಿಸ್ತನು ಶಿಲುಬೆಗೇರಿದನು. ಜಗದ್ವಂದ್ಯ ಲೋಕಗುರು ಪೂಜ್ಯ ಮಹಾತ್ಮಾಗಾಂಧಿ ತಲೆಕೆಟ್ಟ ಕೊಲೆಗಾರನೊಬ್ಬನ ಕ್ರೂರ ಹಸ್ತದಿಂದ ಪ್ರಾರ್ಥನಾ ಸಭೆಯ ವೇದಿಕೆಯ ಮೇಲೆ, ತಮ್ಮಿಬ್ಬರು ಮೊಮ್ಮಕ್ಕಳ ಪ್ರೇಮ ಬಾಹುಗಳ ನಡುವೆ ನಿಂತು, ತಮ್ಮನ್ನು ಸ್ವಾಗತಿಸುತ್ತಿದ್ದ ವಿಪುಲಜನವೃಂದಕ್ಕೆ ತಮ್ಮೆರಡು ಕೈಗಳನ್ನೂ ಹಣೆಗೆತ್ತಿ ನಮಸ್ಕರಿಸುತ್ತಿದ್ದಾಗಲೇ ಮೃತ್ಯುರಾಹುವಿಗೆ ತುತ್ತಾದರು. ವೇದಿಕೆಯ ಮೇಲೆ ಅತೀ ಸಮೀಪದಲ್ಲಿ ಕುಳಿತ ಹಿಂದೂ ಯುವಕನೊಬ್ಬನು ಚಿಮ್ಮಿ ನಿಂತು ಅವರ ತೆರೆದೆದೆಗೆ ಗುಂಡಿಟ್ಟು ಕೊಂದನಂತೆ. ಹಿಂದೆಂದೂ ಭರತಖಂಡದಲ್ಲಿ ನಡೆಯದಂತಹ ಇಂತಹ ಅಸಹ್ಯವಾದ ಘೋರ ಪಾತಕವನ್ನು ಇಂದು ನಡೆಸಿ ನಮ್ಮ ದೇಶಕ್ಕೆ ದೇಶವೇ ಜಗತ್ತಿನ ಮುಂದೆ ಮಹಾಪರಾಧಿಯಾಗಿದೆ; ಅವಮಾನಿತವಾಗಿದೆ. ನಾವು ತಲೆಯೆತ್ತಿ ನಡೆಯದಂತಾಗಿದೆ. ನಮ್ಮ ದೇಶ ತಿರಸ್ಕಾರಕ್ಕೂ ಶಾಪಕ್ಕೂ ಪಕ್ಕಾಗಿದೆ. ಈ

ಪಾಪಕಾರ್ಯಕ್ಕೆ ತಕ್ಕ ತಪಸ್ಯೆಯಿಂದ ಪಶ್ಚಾತ್ತಾಪದಿಂದ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ನಮಗೆ ಯೇಸುಕ್ರಿಸ್ತನನ್ನು ಮೊಳೆಹೊಡೆದು ಕೊಂದ ಜನಾಂಗಕ್ಕಾಗಿರುವ ದುರ್ಗತಿಯೇ ಒದಗುತ್ತದೆಯೇನೋ ಎಂದು ಹೆದರಿಕೆಯಾಗುತ್ತಿದೆ.

ಮತ್ತೇನಿದ್ದೀತು ನಾವು ಕೈಕೊಳ್ಳುವ ಆ ಪ್ರಾಯಶ್ಚಿತ್ತ? ಯಾವ ಮಹಾಪುರುಷನ ಪ್ರೇಮಮಯ ಹೃದಯವು ಗುಂಡು ತಗುಲಿ ಬಿರಿಯಿತೋ ಆ ಹೃದಯದ ಆಶೆ ಆಕಾಂಕ್ಷೆ ಆದರ್ಶಗಳನ್ನು ಅಚಂಚಲವಾದ ದೃಢತೆಯಿಂದ ಆಚರಿಸಿ ಸಾಧಿಸುವುದೊಂದೇ ನಮಗೆ ಮುಂದಿರುವ ಶ್ರೇಯೋಮಾರ್ಗ. ಶಿಲುಬೆರೇರಿದ ಯೇಸು ಕ್ರಿಸ್ತನಿಗೆ, 'ಕ್ಷಮಿಸು ತಂದೆ!' ಎಂದು ಮಾನವರ ಪರವಾಗಿ ಭಗವಂತನನ್ನು ಬೇಡಲು ಸ್ವಲ್ಪ ಪ್ರಜ್ಞೆಯಾದರೂ ಇತ್ತಂತೆ. ನಿನ್ನೆ ಮಡಿದ ನಮ್ಮ ಕ್ರಿಸ್ತನಿಗೆ ಅಷ್ಟಕ್ಕೂ ಅವಕಾಶ ಕೊಡದಷ್ಟು ಬೇಗನೆ ಪ್ರಜ್ಞೆ ಹೋಯಿತಂತೆ. ಆದರೂ ಆತನ ಮುಖಮುದ್ರೆ ಪ್ರಶಾಂತವಾಗಿ, ಕ್ಷಮಾಶೀಲವಾಗಿ, ಧ್ಯಾನಪೂರ್ಣ ಶಾಂತಿಯಿಂದ ತುಂಬಿ, 'ಕ್ಷಮಿಸು ತಂದೆ!' ಎನ್ನುವಂತಿತ್ತೆಂದು ಆ ವರ್ಣನೆಯನ್ನು ಕೇಳಿದವರೆಲ್ಲರಿಗೂ ವೇದ್ಯವಾಗಿರುಬೇಕು. ಮೃತಸ್ಥಿತಿಯಲ್ಲಿಯೂ ಅಮೃತವನ್ನೇ ಪ್ರೋಕ್ಷಿಸುತ್ತಿದ್ದ ಮುಖಮುದ್ರೆಯ ಸಂದೇಶ–ಕ್ಷಮೆ, ಪ್ರೇಮ, ಸತ್ಯ, ಅಹಿಂಸೆ ಇವು ನಮಗೆ ರಕ್ಷಾಮಂತ್ರಗಳಾಗಬೇಕು. ಹಾಗಾದರೆ ಮಾತ್ರವೇ ನಮ್ಮ ದೇಶದ ಸದ್ಯೋಜಾತ ಸ್ವಾತಂತ್ರ್ಯಕ್ಕೆ ರಕ್ಷಾಯಂತ್ರ ಸಿದ್ಧವಾಗುತ್ತದೆ.

ಎಷ್ಟು ಅನಿರೀಕ್ಷಿತ, ಎಷ್ಟು ಆಕಸ್ಮಿಕ, ಎಷ್ಟು ಭಯಂಕರವಾಗಿತ್ತು ನಿನ್ನೆ ಬಂದ ಆ ಘೋರವಾರ್ತೆ! ಮೊನ್ನೆತಾನೆ ಆಮರಣ ಪರ್ಯಂತ ಕೈಕೊಂಡ ಉಪವಾಸ ವ್ರತದಿಂದ ದೆಹಲಿಯ ವಿಷಸಮುದ್ರವನ್ನೂ ಕ್ಷೀರಸಾಗರವಾಗಿ ಪರಿವರ್ತಿಸಿ, ಲೋಕದ ಪ್ರಶಂಸೆಗೂ ಪೂಜೆಗೂ ಕೃತಜ್ಞತೆಗೂ ಪಾತ್ರರಾಗಿದ್ದರು. ಅಲ್ಲದೇ ನಮ್ಮೆಲ್ಲರಲ್ಲಿ ಮತ್ತೊಂದು ಹೊಸ ಆಶೆಯನ್ನೂ ಪ್ರಚೋದಿಸಿದ್ದರು. ನೂರಿಪ್ಪತ್ತೈದು ವರ್ಷದ ಹೊಂಗನಸು ಎಪ್ಪತ್ತೆಂಟಕ್ಕೇ ಬಿರಿಯುವಂತೆ ಮಾಡಿದ ಈಶ್ವರೇಚ್ಛೆಯ ಕಟುಲೀಲೆಗೆ ಏನು ಹೇಳುವುದು? ತಲೆಬಾಗಿ ಮೂಖರಾಗುವುದೊಂದೇ ದಾರಿ. ಆ ವಾರ್ತೆ ಕಿವಿಗೆ ಬಿದ್ದಾಗ ಜನ ನಕ್ಕುಬಿಟ್ಟರು. ಅದನ್ನು ತಿಳಿಸಿದವರಿಗೆ ಛೀ ಮಾಡಿದರು. ಸತ್ತರೆಂದು ನಂಬುವುದಾದರೂ ಎಂತು? ಗುಂಡು ಬಿದ್ದು ಸತ್ತರೆಂದಾಗಲೂ ಯಾರೂ ನಂಬದೆಹೋದರು. ಏನು? ಗಾಂಧೀಜಿಗೆ? ಗುಂಡಿನೇಟು? ಅಸಾಧ್ಯ! ಅಸಂಭವ! ಅವಿವೇಕ! ಸುಳ್ಳು! ಖಂಡಿತಾ ಸುಳ್ಳು! ಆಕಾಶವಾಣಿ ಲೋಕವಾರ್ತೆಯನ್ನು ಮತ್ತೆ ಮತ್ತೆ ಒತ್ತಿ ಒತ್ತಿ ಹೇಳಿದಾಗ ನಂಬಲೇಬೇಕಾಗಿ ಬಂತು.

ಆಗಂತೂ ಜನರಲ್ಲುಂಟಾದ ಕಳವಳ, ಭೀತಿ, ನಿರಾಶೆ, ಸಂಕಟ ಇವುಗಳನ್ನು ಹೇಳತೀರದು. ಬದುಕಿನ ಅರ್ಥವೇ ಇದ್ದಕ್ಕಿದ್ದಂತೆ ಶೂನ್ಯವಾದಂತಾಯಿತು. ಜೀವನದ ಪ್ರಯೋಜನವೇ ಕೊನೆಮುಟ್ಟಿದಂತೆ ತೋರಿತು. ಗಾಂಧಿ ಇಲ್ಲದ ಜಗತ್ತು! ತೆಗೆ ತೆಗೆ ಅದೆಲ್ಲಿಯ ಮಾತು! ಎರಡು ತಲೆಮಾರುಗಳಿಂದ ಪ್ರಪಂಚದ, ಅದರಲ್ಲಿಯೂ ಭರತಖಂಡದ ಬಾಳನ್ನೆಲ್ಲ ಆವರಿಸಿ, ಉಸಿರನ್ನೆಲ್ಲ ತುಂಬಿ ಚೇತನಕ್ಕೆ ಶಕ್ತಿಯಾಗಿ, ಕಣ್ಣಿಗೆ ಬೆಳಕಾಗಿ, ದಾರಿಗೆ ಸಂಗಾತಿಯಾಗಿ, ಕೆಳೆಯನಾಗಿ, ನಾಯಕನಾಗಿ, ಸುಧಾರಕನಾಗಿ, ಮಾರ್ಗದರ್ಶಿಯೂ ಗುರುವೂ ಆಗಿದ್ದ ಗಾಂಧಿ ಇಲ್ಲದ ಜಗತ್ತು ಜಗತ್ತೆ? ಅದೊಂದು ಅಮಂಗಲ ವಿಪತ್ತು! ಉಳಿದವರ ಮಾತಿರಲಿ! ನೆಹರು, ಪಟೇಲ್, ಆಜಾದ್ ಅಂಥವರಿಗೂ ಏನಾಯಿತೆಂಬುದನ್ನು ರೇಡಿಯೋದಿಂದ ಕೇಳಿದ್ದೇವೆ. ಭಾರತದ ಪ್ರಧಾನಿ ಮತ್ತು ಉಪಪ್ರಧಾನಿ ಇಬ್ಬರೂ ದೆಹಲಿಯಿಂದ ಮಾಡಿದ ಪ್ರಸಾರ ಭಾಷಣಗಳಲ್ಲಿ ತಮ್ಮ ತಮ್ಮ ಸಹಜ ಧೈರ್ಯವನ್ನೂ ಒತ್ತಿ ಮೀರಿಬಂದ ದುಃಖಾತಿಶಯಕ್ಕೆ ಗದ್ಗದ ಧ್ವನಿ ನೀಡಿದುದನ್ನು ನಾವೆಲ್ಲರೂ ಆಲಿಸಿ ಮರುಗಿದ್ದೇವೆ.


ನಿಜ, ನಮ್ಮ ದುಃಖಕ್ಕೆ ತೀರವಿಲ್ಲ; ನಮ್ಮ ನಷ್ಟಕ್ಕೆ ಅಳತೆಯಿಲ್ಲ. ಎಂದೆಂದಿಗೂ ಪಡೆಯಲಾಗದ ಒಡವೆ ಚ್ಯುತವಾಗಿದೆ. ನಮ್ಮ ಆಧ್ಯಾತ್ಮಿಕ ರಿಕ್ತತೆಯೋ ಪಾತಾಳದಂತೆ ಗಂಭೀರವಾಗಿದೆ; ಆಕಾಶದಂತೆ ವಿಸ್ತಾರವಾಗಿದೆ. ನಿನ್ನೆ ಸರ್ವದೇಶಗಳನ್ನೂ ನಗುವಂತೆ ಶ್ರೀಮಂತರಾಗಿದ್ದವರು ಇಂದು ಎಲ್ಲ ನಾಡುಗಳೂ ನಗುವಂತೆ ದಟ್ಟದರಿದ್ರರಾಗಿದ್ದೇವೆ. ಆದರೂ, ಪಂಡಿತ ನೆಹರು ತಮ್ಮ ಭಾಷಣದಲ್ಲಿ ಹೇಳಿದಂತೆ, ಕ್ಲೈಬ್ಯಕ್ಕಿದು ಕಾಲವಲ್ಲ; ಅಧೈರ್ಯಕ್ಕಿದು ಅಪಕಾಶವಲ್ಲ; ಅಸ್ಥಿರತೆಗೆ ಸಮಯವಲ್ಲ. ಗಾಂಧೀಜಿಗಾಗಿ ನಾವು ಅಳಬೇಕಾಗಿಲ್ಲ. ನಮ್ಮ ದುರದೃಷ್ಟಕ್ಕಾಗಿಯಾದರೂ ಅಳುತ್ತ ಕೂರುವುದು ಅವಿವೇಕವೇ.

ಈಶ್ವರನ ಲೀಲೆಯಲ್ಲಿ ಇಂತಹ ಘಟನೆ ಮೊಟ್ಟಮೊದಲನೆಯದಲ್ಲವೆಂದೂ ತೋರುತ್ತದೆ. ಶ್ರೀಕೃಷ್ಣನು ಎಂತಹ ದುರಂತ ಸನ್ನಿವೇಶದಲ್ಲಿ ಮೃತನಾದನೆಂಬುದನ್ನು ಊಹಿಸಿಕೊಳ್ಳಿ. ಶ್ರೀರಾಮಚಂದ್ರನಿಗೆ ಕೊನೆ ಬಂದ ಪರಿಯನ್ನೂ ನೆನೆಯಿರಿ. ಶ್ರೀ ಕ್ರಿಸ್ತನು ಎಂತಹ ದುರ್ಮರಣಕ್ಕೀಡಾದನು ಎಂಬುದನ್ನು ಪರ್ಯಾಲೋಚಿಸಿ. ನಮಗೆ ಅನರ್ಥವಾಗಿರುವುದು ಈಶ್ವರನ ಸಮದೃಷ್ಟಿಗೆ ಅರ್ಥಪೂರ್ಣವೂ ಸಾರ್ಥಕವೂ ಆಗಿರಬಾರದೇನು? ಮಹಾತ್ಮರೇ ಹೇಳುತ್ತಿದ್ದರು: 'ನನ್ನನ್ನು ಕೊಲ್ಲುವ ಸಾಮರ್ಥ್ಯ ಈಶ್ವರನಿಗೊಬ್ಬನಿಗೇ ಇದೆ' ಎಂದು. ಕೊಂದವನು ಯಃಕಶ್ಚಿತ್ ಮನುಷ್ಯನಾದರೂ ಅಲ್ಲಿಯೂ ರುದ್ರನ ಹಸ್ತವನ್ನು ಕಾಣಬಹುದು. ಸರ್ವಮಂಗಲ ನಿಧಿಯಾದ ಭಗವಂತನ ಇಚ್ಛೆಯಲ್ಲಿ ಶ್ರದ್ಧೆಯಿಟ್ಟು ಸಮಾಧಾನ ತಂದುಕೊಂಡು ಮುಂದಿನ ಕಾರ್ಯಕ್ಕೆ ಸೊಂಟಕಟ್ಟಿ ನಿಲ್ಲಬೇಕು.

ಆತ್ಮದ ಅಮೃತತ್ವದಲ್ಲಿಯೂ ಅವತಾರಗಳಲ್ಲಿಯೂ ಜನ್ಮಾಂತರ ಮತ್ತು ಪುನರ್ಜನ್ಮಗಳಲ್ಲಿಯೂ ಶ್ರದ್ಧಾಳುಗಳಾದ ನಮಗೆ ಪೂಜ್ಯ ಗಾಂಧೀಜಿಯ ದೇಹಾವಸಾನವು ಪುರರುತ್ಥಾನಕ್ಕೆ ಪ್ರಚೋದನವಾಗಬೇಕು. ಸ್ಥಿತಿಪ್ರಜ್ಞರಾದ ಗಾಂಧೀಜಿ ಮೃತರಾದರು ಎಂಬುದು ಲೋಕೋಪಚಾರದ ಮಾತು. ನಿಜವಾದ ನಿಜವಲ್ಲ. ಏಕ ದೇಹಸ್ಥವಾಗಿದ್ದ ಚೇತನ ಈಗ ಸರ್ವತ್ರವಾಗಿದೆ. ಆ ಶಕ್ತಿಗೆ ಅಂತ್ಯವಿಲ್ಲ. ಕಾಲ ಕಳೆದಂತೆಲ್ಲ ಅದು ಬಹುಗುಣಿತವಾಗುತ್ತಾ ಹೋಗುತ್ತದೆ. ಭಕ್ತಿಸೂತ್ರಗಳು ಹೇಳುವಂತೆ ಅಂತಹ ವಿಭೂತಿಗಳ ಅವಿರ್ಭಾವದಿಂದ, 'ಮೋದಂತೇ ಪಿತರೋ ನೃತ್ಯಂತಿ ದೇವತಾಃ ಸನಾಥಾಚೇಯಂ ಭೂರ್ಭವತಿ': 'ಪಿತೃಗಳು ನಲಿಯುತ್ತಾರೆ; ದೇವತೆಗಳು ಕುಣಿಯುತ್ತಾರೆ. ನಮ್ಮೀ ಪೃಥ್ವಿ ಸನಾಥಳಾಗುತ್ತಾಳೆ.' ಗಾಂಧೀಜಿಯನ್ನು ಹೆತ್ತ ನಮ್ಮೀ ಪೃಥ್ವಿ ಎಂದೆಂದಿಗೂ ಅನಾಥೆಯಲ್ಲ, ನಿತ್ಯ ಸನಾಥೆ! ಆ ಪೂಜ್ಯ ಮಹಾತ್ಮನು ನಮ್ಮನ್ನು ಕ್ಷಮಿಸಲಿ; ಆತನ ಕೃಪೆ ನಮ್ಮನ್ನು ಕೈಬಿಡದೆ ಕಾಯಲಿ; ಆ ದೇವಮಾನವನ ದಿವ್ಯಸ್ಮೃತಿ ಕಂಗೆಡುತ್ತಿರುವ ನಮ್ಮ ಜನತೆಯ ಮುನ್ನಡೆಗೆ ಗಗನೋನ್ನತ ದೀಪಸ್ತಂಭವಾಗಲಿ!

ಮಹಾತ್ಮಾ ಗಾಂಧೀಕಿ ಜೈ! ಜಯ್ ಹಿಂದ್!

(ಇದು ಮಹಾತ್ಮಾಗಾಂಧೀಜಿಯವರು ಕೊಲೆಯಾದ ಮರುದಿನ (31-01-1948) ರಾಷ್ಟ್ರಕವಿ ಕುವೆಂಪು ಅವರು ಮೈಸೂರು ಆಕಾಶವಾಣಿಯಿಂದ ಮಾಡಿದ ಪ್ರಸಾರ ಭಾಷಣ.)



ಬಾಪು ಕೆ ಲೋಗ್

ಜನ ಸಂಘಟನೆಗೆ ಚಾಲನೆ ..

ಗಾಂಧೀಜಿಯವರ ಚಿಂತನೆಗಳನ್ನು ಆಧರಿಸಿ ' ಬಾಪು ಕೆ ಲೋಗ್ ' ಹೆಸರಿನ ಜನಸಂಘಟನೆಯನ್ನು ಖ್ಯಾತ ರಂಗಕರ್ಮಿ ಹಾಗೂ ಗಾಂಧಿವಾದಿ ಪ್ರಸನ್ನ ಅವರು ಸಂಘಟಿಸಿದ್ದಾರೆ. ಈ ಸಂಘಟನೆಯ ಪ್ರಣಾಳಿಕೆ ಇತ್ತೀಚಿಗೆ ಬೆಂಗಳೂರಿನ ಗಾಂಧಿ ಭವನದಲ್ಲಿ ಬಿಡುಗಡೆಯಾಯಿತು. ಕರ್ನಾಟಕ ಮೂಲದ ಸಂಸತ್ ಸದಸ್ಯ ಅನಿಲ್ ಹೆಗಡೆ ಅವರು ಪ್ರಣಾಳಿಕೆ ಬಿಡುಗಡೆ ಮಾಡಿದರು . ಇತಿಹಾಸಕಾರ ರಾಮಚಂದ್ರ ಗುಹಾ ಮತ್ತು ಆರ್ಥಿಕ ತಜ್ಞ ವಿನೋದ್ ವ್ಯಾಸುಲು , ರಂಗಕರ್ಮಿ ಪ್ರಸನ್ನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು .

ಪ್ರಣಾಳಿಕೆ :

- ಪ್ರಸ್ತುತ ನಾಗರೀಕತ್ವ ಎದುರಿಸುತ್ತಿರುವ ಬಿಕ್ಕಟ್ಟಿನ ಪರಿಣಾಮಗಳನ್ನು ನಿವಾರಿಸಲು 'ಬಾಪು ಜನ' ಸಂಘಟನೆ ಬಯಸುತ್ತದೆ.
- ಈ ಬಿಕ್ಕಟ್ಟನ್ನು ವಾತಾವರಣ – ಬದಲಾವಣೆ – ಬಿಕ್ಕಟ್ಟು ಎಂದು ಸಹ ಕರೆಯಲಾಗುತ್ತದೆ.
- 70 –30 ಆರ್ಥಿಕತೆ ಎಂದು ಎಲ್ಲರೂ ಕರೆಯುತ್ತಿರುವ ಆರ್ಥಿಕ ನಿಲುವನ್ನು ಅಳವಡಿಸುವುದು ನಮ್ಮ ಕಾರ್ಯಕ್ರಮದ ಪ್ರಮುಖ ಉದ್ದೇಶ.
- ಎಪ್ಪತ್ತು – ಮುವ್ವತ್ತು ಆರ್ಥಿಕತೆ ಎಂದರೆ, ಉತ್ಪಾದನೆ ಪ್ರಕ್ರಿಯೆಯಲ್ಲಿ ಕನಿಷ್ಠ ಶೇಕಡಾ ಎಪ್ಪತ್ತರಷ್ಟು ಮಾನವ ಶ್ರಮ ಎಲ್ಲ ಸರಕು ಮತ್ತು ಸೇವೆಗಳಲ್ಲಿ ಇರಬೇಕು.
- ಯಾಂತ್ರಿಕರಣದಿಂದಾಗಿ ಉಂಟಾಗುವ ಒಟ್ಟಾರೆ ನಷ್ಟ ಮುವ್ವತ್ತು ಮಾನವ ದಿನಗಳಿಗಿಂತ ಹೆಚ್ಚಿಗೆ ಇರಬಾರದು.
- **'ಬಾಪು ಜನ'** ಇದು ಜನತೆಯ ಅಹಿಂಸಾ ಆಂದೋಲನ.
- ಹನ್ನೊಂದು ರಚನಾತ್ಮಕ ತತ್ವಗಳನ್ನು ಆಧರಿಸಿ ನಾವು ಕಾರ್ಯ ನಿರತರಾಗುತ್ತೇವೆ .
- ನಾವು ಗಾಂಧೀಜಿ ಹೇಳಿರುವ ಸತ್ಯಾಗ್ರಹ ಮಾದರಿಯ ಪ್ರತಿಭಟನೆಯನ್ನು ಅಗತ್ಯವಿರುವ ಕಡೆ ಅಳವಡಿಸಿ ಕೊಳ್ಳುತ್ತೇವೆ.
- **'ಬಾಪು ಜನ'** ಸಂಘಟನೆಯು ವಸ್ತುಗಳ ಅಡ್ಡಾದಿಡ್ಡಿ ಬಳಕೆಯ ಮೇಲೆ ನೈತಿಕ ಒತ್ತಡ ಹೇರುವ ಉದ್ದೇಶವನ್ನು ಹೊಂದಿದೆ.
- ಪ್ರಸ್ತುತ ಬಿಕ್ಕಟ್ಟುಗಳಿಗೆ ಶ್ರಮಿಕರ ನಾಶ ಅರ್ಥಾತ್ ಸಂಪೂರ್ಣ ಯಾಂತ್ರಿಕರಣವೇ ಕಾರಣ ಎಂದು ನಾವು ನಂಬಿದ್ದೇವೆ .
- ಶ್ರಮಿಕರ ನಾಶವು ಬೌತಿಕವಾಗಿ ಮತ್ತು ನೈತಿಕವಾಗಿ ಕೆಟ್ಟದ್ದು.
- ಇದು ಒಂದು ಕಡೆ ; ಮಾನವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ರಹಿತರನ್ನಾಗಿ ಮಾಡುತ್ತದೆ.
- ಇನ್ನೊಂದೆಡೆ ; ಇದು ದೇವರು ಮತ್ತು ಮಾನವರ ನಡುವಿನ ಪವಿತ್ರ ಬಾಂಧವ್ಯವನ್ನು ಒಡೆದು ಹಾಕುತ್ತದೆ.
- ಶ್ರಮಿಕರ ಜೊತೆ ಇವೆರಡನ್ನು ಒಗ್ಗೂಡಿಸದಿದ್ದರೆ ಪ್ರಾರ್ಥನೆಯು ಬ್ರಾಹ್ಮಣೀಕರಣವಾಗುತ್ತದೆ ಮತ್ತು ದುಡಿಮೆಯು ಅಸ್ಪೃಶ್ಯವಾಗುತ್ತದೆ.
- ಹೀಗಾಗಿ ಧರ್ಮವು ಶ್ರೇಣೀಕೃತ ದಮನಕಾರಿ ಮತ್ತು ದೈವ ವಿರೋಧಿಯಾಗುತ್ತದೆ.
- ಸಂತರ ಪರಂಪರೆಯನ್ನು ಮತ್ತೆ ಉದ್ದೀಪನಗೊಳಿಸಿ ಧರ್ಮದ ಜೊತೆ ಸಮನ್ವಯಗೊಳಿಸಿ ಧರ್ಮವನ್ನು ಉಳಿಸುವುದು 'ಬಾಪು ಜನ' ಸಂಘಟನೆಯ ಉದ್ದೇಶವಾಗಿದೆ.
- ಇವತ್ತಿನ ಬಿಕ್ಕಟ್ಟು ಕೇವಲ ವಾತಾವರಣದ ಬಿಕ್ಕಟ್ಟಲ್ಲ ಅಥವಾ ಕೇವಲ ನೈತಿಕ ಬಿಕ್ಕಟ್ಟಲ್ಲ , ಕೇವಲ ರಾಜಕೀಯ ಬಿಕ್ಕಟ್ಟೂ ಅಲ್ಲ ಇವೆಲ್ಲವೂ ಒಗ್ಗೂಡಿದ ಬಿಕ್ಕಟ್ಟು ಎಂದು ' ಬಾಪು ಜನ ' ಸಂಘಟನೆಯು ಭಾವಿಸುತ್ತದೆ.
- ಇದು ಆಳವಾಗಿ ಬೇರೂರಿರುವ ನಾಗರಿಕತೆಯ ಬಿಕ್ಕಟ್ಟು .
- ಇದು ವಿಚಿತ್ರವೆನಿಸಿದರೂ , ಅದು ಅಸ್ವಾಭಾವಿಕ ಬೆಳವಣಿಗೆಯ ಬಿಕ್ಕಟ್ಟು ಸಹಾ ಆಗಿದೆ.
- ಈ ಬೆಳವಣಿಗೆಯನ್ನು ಜೈವಿಕ ಇಂದನ ದಹನದ ಮೂಲಕ ಉತ್ತೇಜಿಸಲಾಗುತ್ತಿದೆ .

ಬಾಪು ಕೆ ಲೋಗ್

ಠರಾವು

ಯಾಂತ್ರೀಕರಣ ಪ್ರಕ್ರಿಯೆಯು ಹೆಚ್ಚುಕಡಿಮೆ ಪೂರ್ಣಗೊಂಡಿದೆ.
ಇದು ಮನುಕುಲಕ್ಕೆ ದಾರುಣ ಶಿಕ್ಷೆಯೊಂದನ್ನು ವಿಧಿಸುತ್ತಿದೆ.
ಈ ಶಿಕ್ಷೆಯನ್ನು ಹವಾಮಾನ ಬದಲಾವಣೆ ಎಂದು ಕರೆಯಲಾಗುತ್ತಿದೆಯಾದರೂ
ಇದು ಕಾರ್ಮಿಕರ ವಿರುದ್ಧ ಪ್ರಯೋಗವಾಗಿರುವ ದೈವೀ ಶಿಕ್ಷೆ ಎಂದೇ
ನಾವು ನಂಬುತ್ತೇವೆ. ದುರಂತವೆಂದರೆ, ನಾವು, ನಮ್ಮ
[illegible]
[illegible]
[illegible] ರಾಮ ಶಿವ [illegible]
[illegible]
ಬಾಪು ಕೆ ಲೋಗ್ ಎಂಬ [illegible]
[illegible]
[illegible]
[illegible]
[illegible]
[illegible]
[illegible]

The resolution

The process of automating the world, as also of India, is nearly complete. It is resulting in a terrible indictment. This indictment, which is being called the climate change crisis, is an indictment against the evil process of annihilation of labour, we believe.

In order to cover up for the evil, new good-heads are being installed. The old gods, Rama Shiva and Shakti, who represented labour-driven cultures and moral governance, are now being brazenly re-fashioned. The very notion of Rama-Rajya is being upturned and is being ensconced in monster temples.

Bapu ke Log believes in Gram-Swaraj. We have decided to go back to the people and launch a non violent Satyagraha. We want the faithful to re-establish faith, by establishing true Rama-Rajya.

Bapu Ke Log

Manifesto

- Bapu ke Log intends to mitigate the effects of the present civilisational crisis.
- This crisis is also known as Climate-change-crisis.
- The core of our programme is the implementation of what one calls, a 70-30 economy.
- Seventy thirty economy is that system of production, in which there shall be at least seventy percent human labour involved in the production of all goods and services.
- Further, this programme stipulates that the overall loss of labour suffered because of the introduction of automation should not be more than thirty percent man-days.
- Bapu ke Log is a non-violent peoples movement.
- We shall be basing ourselves on the eleven principles of constructive action.
- Where necessary we shall adopt the Satyagraha mode of protest, as stipulated by Gandhi ji.
- Bapu ke Log intends to build Moral pressure over Material consumption.
- We believe, Annihilation of Labour -also known as the programme of Complete automation, is at the root of our present crisis.
- Annihilation of labour is evil, materially and morally both.
- On the one hand, it is making the great mass of human beings jobless.
- And on the other, it is breaking the sacred link between God and human beings.
- Without labour linking the two, worship becomes brahminical and work untouchable.
- Religion, thus, has become hierarchical oppressive and Anti-god.
- Bapu ke Log intends to save religion by linking it up, all over again, with the saintly traditions.
- We believe that the present crisis is not a mere climate crisis, nor is it a mere moral crisis, nor is it a mere political crisis, but a combination crisis.
- It is a deep civilisational crisis.
- Strange as it may sound, it is also a crisis of Un-natural growth.
- Growth was induced through the burning of fossil fuel.



ಆಫ್ರಿಕಾದ ಕೆಲವು ಗಾಂಧಿವಾದಿಗಳು..

ಕೀನ್ಯಾ ಕಾದಂಬರಿಕಾರ ಗೂಗಿ ವಾ ಥಿಯಾಂಗೊ ಬರೆದಿರುವ ನೆನಪುಗಳನ್ನು ಓದುತ್ತಿದ್ದೆ. ತಮ್ಮ ಹಳ್ಳಿಯಲ್ಲಿದ್ದ ಭಾರತದ ವ್ಯಾಪಾರಿಯ ಅಂಗಡಿಯಲ್ಲಿ ಕನ್ನಡಕ ಹಾಕಿ ಕೊಂಡ ನಿಗೂಢ ವ್ಯಕ್ತಿಯ ಚಿತ್ರಗಳನ್ನು 1940ರ ದಶಕದಲ್ಲಿ, ಚಿಕ್ಕ ಹುಡುಗನಾಗಿದ್ದಾಗ ತಾವು ಕಂಡಿದ್ದನ್ನು ಗೂಗಿ ಬರೆದಿದ್ದಾರೆ.

ಆಗ ಅವರ ಶಾಲಾ ಮೇಷ್ಟರು ಆ ಚಿತ್ರಗಳಲ್ಲಿ ಇದ್ದ ವ್ಯಕ್ತಿ ಯಾರು ಎಂಬುದನ್ನು ಅವರಿಗೆ ಹೀಗೆ ಪರಿಚಯ ಮಾಡಿಸಿದರಂತೆ: 'ಭಾರತದಲ್ಲಿ ಬ್ರಿಟಿಷರು ನೂರಾರು ವರ್ಷ ವಸಾಹತುಗಳನ್ನು ಸ್ಥಾಪಿಸಿದ್ದರು. ಮಹಾತ್ಮ ಗಾಂಧಿ ಹಾಗೂ ನೆಹರೂ ನೇತೃತ್ವದಲ್ಲಿ ಭಾರತೀಯರು ಸ್ವಾತಂತ್ರ್ಯಕ್ಕಾಗಿ ಆಗ್ರಹಿಸಿದರು; ಈಗ ನಮ್ಮ ದೇಶದ ಜನ ಜೋಮೊ ಕೆನ್ಯಾಟಾ ಹಾಗೂ ಎಂಬಿಯು ಕೊಯಿನಂಗೆ ನೇತೃತ್ವದಲ್ಲಿ ಹೋರಾಟ ಮಾಡುತ್ತಿದ್ದಾರಲ್ಲ, ಹಾಗೆ. ಭಾರತದ ಜನರ ಆ ನಾಯಕ ನನ್ನು ನೋಡು. ತುಂಡುದಟ್ಟಿ ಉಟ್ಟ ದಿಟ್ಟ ಆತ. ಅಲ್ಲಿ ಅದನ್ನು ಧೋತಿ ಎನ್ನುತ್ತಾರೆ. ಇಡೀ ಜಗತ್ತೇ ಆತನನ್ನು ಪ್ರೀತಿಸಿತು. ಅಂಗಡಿಗಳ ಮುಂದೆಲ್ಲಾ ಆತನದ್ದೇ ಚಿತ್ರಗಳು'.

ಗೂಗಿ ವಾ ಥಿಯಾಂಗೋ (ದಕ್ಷಿಣ ಆಫ್ರಿಕಾದ ನೋಬೆಲ್ ಪ್ರಶಸ್ತಿ ವಿಜೇತ ಸಾಹಿತಿ)



ಗೂಗಿ ತಮ್ಮ ಮೇಷ್ಟರು ಕಟ್ಟಿಕೊಟ್ಟ ಗಾಂಧೀಜಿ ಪರಿಚಯದಿಂದ ನೆನಪನ್ನು ಇನ್ನಷ್ಟು ಚುರುಕುಗೊಳಿಸಿಕೊಂಡರು. ಗಾಂಧಿ ನಿಲುವು, ಅವರು ಉಡುತ್ತಿದ್ದ ಧೋತಿ, ಸರಳತೆ ಎಲ್ಲವನ್ನೂ ಅವರ ಕಣ್ಣಿಗೆ ಕಟ್ಟುವಂತೆ ಮೇಷ್ಟರು ಬಣ್ಣಿಸಿದ್ದರು. ಕೀನ್ಯಾದಲ್ಲಿದ್ದ ಲಿಮುರುವಿನ ಭಾರತೀಯರ ಅಂಗಡಿಗಳಲ್ಲಿ ಜೋತು ಬಿದ್ದಿದ್ದ ಗಾಂಧಿ ಮಹಾತ್ಮನ ಚಿತ್ರಗಳು ಗೂಗಿ ಕಲ್ಪನೆಗೆ ಇನ್ನೂ ಸ್ಪಷ್ಟತೆ ಒದಗಿಸಿದ್ದವು.

ಜೊತೆಗೆ ಅವರ ತಾಯಿ ಒಂದೊಮ್ಮೆ ಭಾರತೀಯರು ಗಾಂಧೀಜಿಯನ್ನು ದೇವರ ಸಾಲಿನಲ್ಲಿ ನೋಡುತ್ತಾರೆ ಎಂದು ಹೇಳಿದ್ದು ಸ್ಮೃತಿಪಟಲದಲ್ಲಿ ಉಳಿದಿತ್ತು. ಗೂಗಿಯ ಮೇಷ್ಟರು ಇನ್ನೂ ಒಂದು ಮಾತು ಹೇಳಿದ್ದರು: '1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಮೇಲೆ 1957ರಲ್ಲಿ ನಮಗೂ ಸ್ವಾತಂತ್ರ್ಯ ಸಿಗದೇ ಇರಲು ಕಾರಣವೇ ಇರಲಿಲ್ಲ. ಗಾಂಧಿ ಬ್ರಿಟಿಷರ ವಿರುದ್ಧ ಸತ್ಯಾಗ್ರಹದ ಮೂಲಕ ಹೋರಾಡಿದರು. ಕೆನ್ಯಾಟ ಇಲ್ಲಿ ಸ್ವಾತಂತ್ರ್ಯಕ್ಕೆ ಆಗ್ರಹಿಸಿದ್ದೂ ನ್ಯಾಯದ ತಳಹದಿಯ ಮೇಲೆಯೇ'.

ಹ್ಯಾರಿ ತುಕು (ಕೀನ್ಯಾದ ಕಪ್ಪು ಜನರ ನಾಯಕ)



ಆ ಮೇಷ್ಟರು ಗಾಂಧಿ ಹಾಗೂ ಕೀನ್ಯಾದ ದೇಶ ಭಕ್ತರ ನಡುವಿನ ಸಂಬಂಧವನ್ನೂ ತಮ್ಮ ಶಿಷ್ಯನಿಗೆ ಹೇಳಿದರು. 1920ರಲ್ಲಿ ಕಾರ್ಮಿಕ ನಾಯಕ ಹ್ಯಾರಿ ತುಕು ಅವರಿಗೆ ಮಣಿಭಾಯಿ ದೇಸಾಯಿ ಎಂಬ ಗುಜರಾತಿನಿಂದ ವಲಸೆ ಬಂದ ವ್ಯಕ್ತಿ ಸಹಾಯ ಮಾಡಿದ್ದ. ಆತ ಗಾಂಧಿ ಅನುಯಾಯಿ. ನಂತರ ಅಮೆರಿಕದಲ್ಲಿ ಗೂಗಿ ಅಧ್ಯಯನ ನಡೆಸಿದರು. ಗಾಂಧಿ ಹಾಗೂ ಕೀನ್ಯಾ ನಡುವಿನ ಈ ಸಂಬಂಧ ಕುರಿತಂತೆ ಪುರಾವೆಗಳನ್ನೂ ಪತ್ತೆ ಮಾಡಿದರು.

ಗಾಂಧಿ ಸ್ನೇಹಿತರೂ ಆಗಿದ್ದ ಚಳವಳಿಕಾರ ಹಾಗೂ ಕ್ರಿಶ್ಚಿಯನ್ ಪಾದ್ರಿ ಸಿ.ಎಫ್. ಆಂಡ್ರೂಸ್ ಒಮ್ಮೆ ತುಕು ಅವರನ್ನು ಭೇಟಿ ಮಾಡಿದರು. ಆಗ ಆಂಡ್ರೂಸ್ಗೆ ತುಕು ಹೇಳಿದ್ದು– 'ಗಾಂಧಿ ಆ ದೇಶದ ದೊಡ್ಡ ಪ್ರತಿಭಾವಂತ'. ತುಕು ಪ್ರತಿಭಟನೆ ನಡೆಸಿದ್ದರಿಂದ ಬಂಧನಕ್ಕೆ ಒಳಗಾಗಿ, ಗಡಿಪಾರಾದರು. ಆಗ ಅವರಿಗೆ ಸಹಾಯ ಮಾಡುವಂತೆ ದೇಸಾಯಿ ಒತ್ತಾಯಿಸಿದ್ದು ಆಂಡ್ರೂಸ್ ಅವರನ್ನು. ಕ್ರಿಶ್ಚಿಯನ್ ಪಾದ್ರಿ ಇಂಗ್ಲೆಂಡ್‌ನಲ್ಲಿ ತುಕು ಪರ ದನಿ ಎತ್ತಿದರಾದರೂ ಅದು ಅಷ್ಟೇನೂ ಪರಿಣಾಮ ಬೀರಲಿಲ್ಲ.

ಆಗ ಅವರು ತುಕು ಸಮಸ್ಯೆ ಕುರಿತು ಗಾಂಧಿಗೆ ಪತ್ರ ಬರೆದರು. ಗಾಂಧಿ ತಾವು ಪ್ರಕಟಿಸುತ್ತಿದ್ದ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ 'ಪಾಪ, ಹ್ಯಾರಿ ತುಕು!' ಎಂಬ ಅಂಕಣ ಪ್ರಕಟಿಸಿದರು. 'ತುಕು ತಮ್ಮ ಸಮಸ್ಯೆಯನ್ನು ಆಂಡ್ರೂಸ್ ಅವರಿಗೆ ತಲುಪಿಸಿದರು. ಈ ಅಂಕಣದಲ್ಲಿ ನಾನೂ ಅದನ್ನೇ ಬರೆದಿದ್ದೇನೆ. ಅಧಿಕಾರದಾಹಿಗಳಿಂದ ಕಷ್ಟದಲ್ಲಿರುವ ತುಕು ಅವರಿಗೆ ಇದರಿಂದ ಪರಿಹಾರ ಸಿಗಲಾರದು. ಆದರೆ, ಅವರು ಇದರಲ್ಲಿ ಪ್ರಕಟವಾದ ಸಾಲುಗಳನ್ನು ಓದಿದರೆ ದೂರದ ಭಾರತದಲ್ಲಿಯೂ ತಮಗೆ ಅನುಕಂಪ ಸೂಚಿಸುವ ಮನಸ್ಸುಗಳಿವೆಯಲ್ಲಾ ಎಂದು ಸಮಾಧಾನ ಪಟ್ಟುಕೊಳ್ಳಬಹುದು' ಎಂದು ಆ ಅಂಕಣದಲ್ಲಿ ಗಾಂಧಿ ಬರೆದಿದ್ದರು.

ಸಮಕಾಲೀನ ದಾಖಲೆಗಳ ಪ್ರಕಾರ ತುಕು ಕೀನ್ಯಾದಲ್ಲಿ ಮಹಾತ್ಮನಿಗೆ ಸರಿ ಸಮನಾಗಲು ಬಯಸಿದ್ದರು. ಬ್ರಿಟಿಷ್ ವಸಾಹತುಶಾಹಿಯೊಬ್ಬ ಬರೆದಿರುವಂತೆ, 'ಈ ಹ್ಯಾರಿ ತುಕು ತನ್ನನ್ನು ತಾನು ಭಾರತದ ಗಾಂಧಿಗೆ ಹೋಲಿಸಿಕೊಳ್ಳಲು

ಇಷ್ಟಪಡುತ್ತಾನೆ'. ಒಂದು ಯಶಸ್ವಿ ಪ್ರತಿಭಟನೆಯ ನಂತರ ಕೀನ್ಯಾದಲ್ಲಿನ ಭಾರತೀಯರು ತುಕು ಅವರಿಗೆಂದೇ ಒಂದು ಔತಣಕೂಟ ಏರ್ಪಡಿಸಿದರು. ಆಗ ತುಕು ಹೀಗೆ ಹೇಳಿದರಂತೆ: 'ಗಾಂಧಿ ಭಾರತದಲ್ಲಿ ರಾಜನಾಗುತ್ತಾರೆ. ಇಲ್ಲಿ ರಾಜನಾಗುವುದು ನಾನೇ'.

ವಸಾಹತುಶಾಹಿ ವ್ಯವಸ್ಥೆ ವಿರುದ್ಧ ಹೋರಾಟದ ರೂವಾರಿಯಾದ ಗಾಂಧಿಯನ್ನು ಆಫ್ರಿಕಾದ ಹಲವು ದೇಶಭಕ್ತರು ಹೊಗಳಿದರು. ಅವರಲ್ಲಿ ಕೀನ್ಯಾದ ಜೋಮೊ ಕೆನ್ಯಾಟಾ ಹಾಗೂ ಟಾಮ್ ಮಬೋಯಾ, ಜಾಂಬಿಯಾದ ಕೆನೆತ್ ಕೌಂಡಾ, ತಾಂಜಾನಿಯಾದ ಜೂಲಿಯಸ್ ನ್ಯೆರೇರೆ ಹಾಗೂ ಘಾನಾದ ಕ್ವಾಮ್ ನಕ್ರುಮಾ ಮುಖ್ಯರಾದವರು. ಬೋಟ್ಸ್ವಾನಾದ ಚರಿತ್ರೆ ರೂಪುಗೊಂಡಿದ್ದರಲ್ಲೂ ಗಾಂಧಿ ಪ್ರಭಾವಳಿ ಇದೆ. 1952ರಲ್ಲಿ ಅಲ್ಲಿನ ಜನಪ್ರಿಯ ದೊರೆ ಸೆರೆಟ್ಸೆ ಖಾಮಾ ಎಂಬುವನನ್ನು ಬ್ರಿಟಿಷರು ಗಡಿಪಾರು ಮಾಡಿದಾಗ ಸ್ಥಳೀಯ ಮುಖಂಡರು ಹೊಸ ನಾಯಕನ ಆಯ್ಕೆಗೆ ಒಪ್ಪಲಿಲ್ಲ. ತೆರಿಗೆ ಕೂಡ ಕಟ್ಟುವುದಿಲ್ಲ ಎಂದು ಪಟ್ಟು ಹಿಡಿದರು. ಸೆರೆಟ್ಸೆ ಖಾಮಾಗೆ ಸಿಗಬೇಕಾದ ಮರ್ಯಾದೆ ಸಿಗುವವರೆಗೆ ಈ ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಸಿದರು. ಅವರು ಹೀಗೆ ಮಾಡಿದ್ದರ ಹಿಂದೆ ಗಾಂಧಿ ಸತ್ಯಾಗ್ರಹದ ಪ್ರಭಾವವಿತ್ತು.

ಹಾಗೆ ನೋಡಿದರೆ, ಗಾಂಧಿ ಪ್ರಭಾವ ಹೆಚ್ಚಾಗಿ ಇದ್ದದ್ದು ದಕ್ಷಿಣ ಆಫ್ರಿಕಾದಲ್ಲಿ. ಆ ದೇಶದಲ್ಲಿ ಗಾಂಧಿ ಸುದೀರ್ಘ ಕಾಲ ವಾಸ ಮಾಡಿದ್ದರು. ಭಾರತಕ್ಕೆ ಮರಳಿದ ನಂತರ ತಮ್ಮ ಮಗ ಮಣಿಲಾಲ್‌ನನ್ನು ಅಲ್ಲಿಗೆ ಕಳುಹಿಸಿ, 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಮೂಲಕ ಆದರ್ಶದ ಕನಸುಗಳನ್ನು ಬಿತ್ತುವಂತೆ ನೋಡಿಕೊಂಡರು. ಮಣಿಲಾಲ್ ಗಾಂಧಿ ಸಹಜವಾಗಿಯೇ ತಮ್ಮ ತಂದೆಯ ಮಾತಿಗೆ ಬೆಲೆ ಕೊಟ್ಟರು. ಅವರಷ್ಟೇ ಅಲ್ಲದೆ, ದಕ್ಷಿಣ ಆಫ್ರಿಕಾದಲ್ಲಿದ್ದ ಇಬ್ಬರು ಪ್ರಮುಖ ಹೋರಾಟಗಾರರಾದ ಯುಸೂಫ್ ದಾದೂ ಹಾಗೂ ಮಾಂಟಿ ನೈಕರ್ ನಿರಂತರವಾಗಿ ಗಾಂಧಿಯ ಸಂಪರ್ಕದಲ್ಲಿದ್ದರು. 1946 ರಲ್ಲಿ ಪಕ್ಷಪಾತಿ ಭೂಕಾನೂನಿನ ವಿರುದ್ಧ ಅವರು ಪ್ರಾರಂಭಿಸಿದ ಹೋರಾಟದಲ್ಲೂ ಸತ್ಯಾಗ್ರಹದ ತತ್ವಗಳೇ ಇದ್ದವು.

ಮಾರ್ಚ್ 1947ರಲ್ಲಿ ದಾದೂ ಹಾಗೂ ನೈಕರ್ ವರ್ಣಭೇದ ನೀತಿಯ ವಿರುದ್ಧ ಭಾರತ ಪ್ರಾರಂಭಿಸಿದ ಹೋರಾಟವನ್ನು ತಾವೂ ಅಳವಡಿಸಿಕೊಂಡರು. 'ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್' (ಎಎನ್‌ಸಿ) ಜೊತೆ ದಕ್ಷಿಣ ಆಫ್ರಿಕಾದಲ್ಲಿ ಅವರು ಕೈಜೋಡಿಸಿದರು. 1940 ಹಾಗೂ 1950ರ ದಶಕದಲ್ಲಿ ಆಫ್ರಿಕಾದ ಹೋರಾಟದಲ್ಲಿ ನಿರತರಾಗಿದ್ದ ನಾಯಕರೆಲ್ಲಾ ಬದ್ಧ ಗಾಂಧಿವಾದಿಗಳಾಗಿದ್ದರು. ಎಎನ್ಸಿಯ ಹಲವು ಸಭೆಗಳು ನಡೆದದ್ದು ಜೊಹಾನ್ಸಬರ್ಗ್, ಗಾಂಧಿ ಹೆಸರಿನದ್ದೇ ಸಭಾಭವನದಲ್ಲಿ.



ಆಲ್ಬರ್ಟ್ ಲಥಿಲ್ (ವರ್ಣಬೇಧ ನೀತಿಯ ವಿರುದ್ಧದ ಹೋರಾಟಗಾರ. ಆಫ್ರಿಕಾ ನ್ಯಾಷನಲ್ ಕಾಂಗ್ರೆಸ್ ಅಧ್ಯಕ್ಷ . 1952 – 1967. ಅಹಿಂಸಾತ್ಮಕ ಹೋರಾಟದಲ್ಲಿ ನಂಬಿಕೆಯಿದ್ದ ನಾಯಕ. ನೋಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ)

(ಎಎನ್‌ಸಿ) ಪಾಲಿಗೆ 1950, ಹೋರಾಟದ ಪ್ರಮುಖ ದಶಕ. ಆಗ ಅದರ ನಾಯಕರಾಗಿದ್ದ ಚೀಫ್ ಆಲ್ಬರ್ಟ್ ಲುಥಿಲಿ ಗಾಂಧಿ ತತ್ವಗಳನ್ನು ಓದಿಕೊಂಡರಲ್ಲದೆ, ಭಾರತಕ್ಕೆ ಭೇಟಿ ನೀಡಿದರು. ಅಹಿಂಸೆಯ ಶಕ್ತಿಯನ್ನು ಅವರು ಮುಕ್ತಕಂಠದಿಂದ ಹೊಗಳಿದರು. ಎಎನ್‌ಸಿಯ ಇನ್ನೊಬ್ಬ ಪ್ರಮುಖ ನಾಯಕ ಜಡ್.ಕೆ. ಮ್ಯಾಥ್ಯೂಸ್, ತಾವು ಗಾಂಧಿ ಹೋರಾಟದ ಪ್ರಾಯೋಗಿಕ ಹಾಗೂ ನೈತಿಕ ಪರಿಣಾಮಗಳನ್ನು ಎದೆಗಿಳಿಸಿಕೊಂಡವರು ಎಂದು ಹೇಳಿಕೊಂಡಿದ್ದರು.



ಝೆಡ್ ಕೆ ಮ್ಯಾಥ್ಯು (ದಕ್ಷಿಣ ಆಫ್ರಿಕಾದ ಶಿಕ್ಷಣ ವಲಯದಲ್ಲಿ ಬಹು ದೊಡ್ಡ ಹೆಸರು. ನೆಲ್ಸನ್ ಮಂಡೇಲಾ , ಒಲಿವರ್ ಟ್ಯಾಂಬೊ ಇತ್ಯಾದಿ ಜನನಾಯಕರಿಗೆ ಸ್ಫೂರ್ತಿ ನೀಡಿದ ಶಿಕ್ಷಣ ತಜ್ಞರು)

1952ರಲ್ಲಿ ವರ್ಣಭೇದ ನೀತಿ ವಿರೋಧಿಸಿ ಪ್ರತಿಭಟನಾ ಚಟುವಟಿಕೆಗಳು ನಡೆದವು. ಆಗ ಅನುಸರಿಸಿದ ಮಾರ್ಗಗಳು ಗಾಂಧಿ ತತ್ವಗಳನ್ನೇ ಆಧರಿಸಿದ್ದವು. ಅವುಗಳೆಂದರೆ ;

- ಅನುಮತಿ ಇಲ್ಲದೆ ಸ್ಥಳಕ್ಕೆ ಪ್ರವೇಶಿಸುವುದು.
- ಕರ್ಫ್ಯೂ ಪಾಸ್ಗಳಿಲ್ಲದೆ ರಾತ್ರಿ ಹೊತ್ತು ಸಂಚರಿಸುವುದು. ರೈಲುಗಳಲ್ಲಿ ಯುರೋಪಿಯನ್ನರಿಗೆ ಮೀಸಲಾದ ಸೀಟುಗಳಲ್ಲಿ ಕೂರುವುದು.
- ಯೂರೋಪಿಯನ್ ಅತಿಥಿ ಗೃಹಗಳನ್ನು ಪ್ರವೇಶಿಸುವುದು.
- ಅಂಚೆ ಕಚೇರಿಯಲ್ಲಿ ಯೂರೋಪಿಯನ್ ವಿಭಾಗಕ್ಕೆ ಹೋಗುವುದು.

1952ರಲ್ಲಿ ಸತ್ಯಾಗ್ರಹವು ದಕ್ಷಿಣ ಆಫ್ರಿಕಾದ ಎಲ್ಲಾ ಪ್ರಾಂತ್ಯಗಳಲ್ಲೂ ಚುರುಕುಗೊಂಡಿತು. ವಿವಿಧ ಪ್ರತಿಭಟನೆಗಳಲ್ಲಿ ತೊಡಗಿದ ಸುಮಾರು 8,500 ಮಂದಿ ಬಂಧನಕ್ಕೆ ಒಳಗಾದರು. ಆ ಪ್ರತಿಭಟನೆಗಳ ನಾಯಕರಲ್ಲಿ ಯುಸೂಫ್ ಅಹ ಮದ್ ಕಚಾಲಿಯಾ, ಗಾಂಧಿ ನಿಕಟವರ್ತಿಯೊಬ್ಬರ ಮಗ ಎ.ಎಂ. ಕಚಾಲಿಯಾ ಸೇರಿದ್ದರು. ಮಾರ್ಚ್ 1952ರಲ್ಲಿ ಒಂದು ಭಾಷಣದಲ್ಲಿ ಯುಸೂಫ್ ಕಚಾಲಿಯಾ, 'ಮನುಷ್ಯನ ಶಕ್ತಿ ಯು ಮಷಿನ್‌ಗನ್‌ಗಳ ಶಕ್ತಿಗಿಂತ ಮಿಗಿಲಾದುದು. ಭಾರತೀಯನಾಗಿರಲಿ ಆಫ್ರಿಕಾದವನೇ ಆಗಿರಲಿ ಒಬ್ಬ ಕಪ್ಪು ಮನುಷ್ಯನ ಏಕಾಗ್ರತೆ ಉಳಿದ ಯಾವುದೇ ವ್ಯಕ್ತಿಯ ಏಕಾಗ್ರತೆಗಿಂತ ಮಿಗಿಲಾದುದು. ನ್ಯಾಯ ನಮ್ಮ ಕಡೆಗೆ ಇದ್ದರೆ ಯಾವ ಮಷಿನ್ ಗನ್, ಪೊಲೀಸ್, ಅಧಿಕಾರಿ ನಾವು ಮುನ್ನಡೆಯುವುದನ್ನು ತಪ್ಪಿಸಲು ಸಾಧ್ಯವಿಲ್ಲ' ಎಂದು ಹೇಳಿದ್ದರು.

ದಕ್ಷಿಣ ಆಫ್ರಿಕಾದಲ್ಲಿ 1950ರ ದಶಕದಲ್ಲಿ ಇದ್ದ ಗಾಂಧಿವಾದಿಗಳಲ್ಲಿ ಭಾರತೀಯರಲ್ಲದೆ ಬಿಳಿ ಬಣ್ಣದ ಆಫ್ರಿಕನ್ನರೂ ಇದ್ದರು. ಕೊನೆಯ ಗುಂಪಿನಲ್ಲಿದ್ದ ಪ್ಯಾಟ್ರಿಕ್ ಡಂಕನ್ ತಂದೆಯೇ ಟ್ರ್ಯಾನ್ಸ್ ವಾಲ್ನಲ್ಲಿ ಗಾಂಧಿ ವಿರೋಧಿಸಿದ್ದ ವರ್ಣಭೇದ ನೀತಿ ರೂಪಿಸಿದ್ದರು. ಗಾಂಧಿ ತತ್ವಗಳ ಪ್ರಮುಖ ವಾಹಕವಾಗಿ ಡಂಕನ್ ಕೆಲಸ ಮಾಡಿದರು. ಗಾಂಧಿ ಬರೆಯುತ್ತಿದ್ದ ಏನೇ ಕೈಗೆ ಸಿಕ್ಕರೂ ಓದಿ, ಅದನ್ನು ಆಫ್ರಿಕನ್ ಭಾಷೆಗಳಿಗೆ ಅನುವಾದ ಮಾಡುತ್ತಿದ್ದ ಅವರು, 'ಈ ದೇಶದ ಜನರಿಗೆ ಸಲ್ಲಿಸಬಹುದಾದ ಉತ್ಕೃಷ್ಟ ಸೇವೆ ಎಂದರೆ ಗಾಂಧಿ ತತ್ವಗಳ ಕುರಿತ ಅರಿವನ್ನು ವ್ಯಾಪಕಗೊಳಿಸುವುದು' ಎಂದೇ ನಂಬಿದ್ದರು.

ಓಲಿವರ್ ಟ್ಯಾಂಬೊ (ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ನ ಜನಪ್ರಿಯ ಅಧ್ಯಕ್ಷ 1967 –1991)

1960ರಲ್ಲಿ ಶಾರ್ಪ್‌ವಿಲ್ಲೆ ಹತ್ಯಾಕಾಂಡ ನಡೆದ ಮೇಲೆ ಎಎನ್ಸಿ ಅಹಿಂಸೆಯನ್ನು ರದ್ದು ಪಡಿಸಿತು. ಅಲಿವರ್ ಟ್ಯಾಂಬೊ, ನೆಲ್ಸನ್ ಮಂಡೇಲಾ ಅಂತೂ ಪದೇಪದೇ ಗಾಂಧಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಇದಕ್ಕೆ ಕಾರಣ– ಸಾಂಘಿಕ ಪ್ರತಿರೋಧದಿಂದ ಜನವಿರೋಧಿ ನೀತಿಗಳನ್ನು ಹೋಗಲಾಡಿಸಬಹುದು ಎಂಬ ಸಾಧ್ಯತೆಯನ್ನು ದಕ್ಷಿಣ ಆಫ್ರಿಕಾದಲ್ಲಿ ಮೊದಲು ತೆರೆದಿಟ್ಟದ್ದೇ ಗಾಂಧಿ. ವರ್ಣಭೇದ ನೀತಿ ಹೋಗಲಾಡಿಸಿದ ಮೇಲೆ ಮಂಡೇಲಾ ತಮ್ಮ ವಿರೋಧಿಗಳನ್ನು ಥೇಟ್ ಗಾಂಧಿಯಂತೆಯೇ ಎದುರಿಸಿ ದರು. ಅವರೊಟ್ಟಿಗೆ ಜೈಲುವಾಸ ಅನುಭವಿಸಿದ್ದ ಅಹಮದ್ ಕತ್ರಾಡಾ ಒಂದೆಡೆ ಹೀಗೆ ಬರೆದಿದ್ದಾರೆ: 'ಗಾಂಧಿಯಂತೆ ನೆಲ್ಸನ್ ಮಂಡೇಲಾ ಅವರಿಗೂ ಕೋಪ, ದ್ವೇಷ ಇರಲಿಲ್ಲ'.



ಅಹಮದ್ ಕಟ್ರಾಡಾ (ನೆಲ್ಸನ್ ಮಂಡೇಲಾ ಜೊತೆ ರಾಬಿನ್ ಐಲ್ಯಾಂಡ್ ಜೈಲಿನಲ್ಲಿ ಸೆರೆಮನೆಯಲ್ಲಿದ್ದ ಕಪ್ಪು ಜನರ ನಾಯಕ)

ಇದಕ್ಕೆ ಪುಷ್ಟಿ ಕೊಡಲು ಕೆಲವು ವೈಯಕ್ತಿಕ ವಿವರಗಳನ್ನೂ ಅವರು ಉಲ್ಲೇಖಿಸಿದ್ದಾರೆ: 'ಮಂಡೇಲಾ, ಗಾಂಧಿ ಇಬ್ಬರೂ ವಕೀಲರು. ಇಬ್ಬರೂ ಜೊಹಾನ್ಸ್ ಬರ್ಗ್‌ನಲ್ಲಿ ವಾಸವಿದ್ದವರು. ಹೋರಾಟಕ್ಕೆ ಇಬ್ಬರೂ ರೂಪುಕೊಟ್ಟ ಸ್ಥಳ ನಗರದ ಫೋರ್ಟ್ ಜೈಲು. ಅದೀಗ ದಕ್ಷಿಣ ಆಫ್ರಿಕಾದ ಸಾಂವಿಧಾನಿಕ ನ್ಯಾಯಾಲಯವಾಗಿದೆ. ಅಲ್ಲಿ ಮಂಡೇಲಾ, ಗಾಂಧಿ ಇಬ್ಬರ ಬದುಕಿನ ಬಗೆಗೆ ಉದಾಹರಣೆ ನೀಡಬಲ್ಲ ದಾಖಲೆಗಳ ಶಾಶ್ವತ ಪ್ರದರ್ಶನ ಇದೆ'.



ಇ.ಎಸ್. ರೆಡ್ಡಿ ಅವರಂತೆ ದಕ್ಷಿಣ ಆಫ್ರಿಕಾ ಮೇಲೆ ಗಾಂಧಿ ಬೀರಿದ ಪರಿಣಾಮವನ್ನು ಅರಿತವರು ಇನ್ನೊಬ್ಬರು ಇಲ್ಲ. 1940ರ ದಶಕದಲ್ಲಿ ಭಾರತದ ವಿದ್ಯಾರ್ಥಿ ನಾಯಕರಾಗಿದ್ದ ರೆಡ್ಡಿ, 1960ರಿಂದ 1980ರ ದಶಕದವರೆಗೆ ವರ್ಣ ಭೇದ ನೀತಿ ಹೋಗಲಾಡಿಸಲು ವಿಶ್ವಸಂಸ್ಥೆ ಹೆಜ್ಜೆ ಇಡಲು ಪ್ರೇರಕಶಕ್ತಿಯಂತೆ ಕೆಲಸ ಮಾಡಿದರು. 1996ರಲ್ಲಿ ರೆಡ್ಡಿ ಬರೆಯುತ್ತಾ, 1946ರಲ್ಲಿ ಭಾರತದ ಪರೋಕ್ಷ ಪ್ರತಿರೋಧ ಹಾಗೂ 1952ರ ಪ್ರತಿಭಟನಾ ಚಟುವಟಿಕೆಗಳಲ್ಲಿ ಗಾಂಧಿ ತತ್ವಗಳು ಹೇಗೆ ಬೆರೆತಿದ್ದವು ಎಂಬುದನ್ನು ಉಲ್ಲೇಖಿಸಿದರು. 'ಎಎನ್ಸಿ ಶಸ್ತ್ರಸಜ್ಜಿತ ಹೋರಾ ಟಕ್ಕೆ ಮುಂದಾಗಲು ನಿರ್ಧರಿಸಿದಾಗಲೂ ಹೆಚ್ಚು ಜೀವಹಾನಿ ಆಗದಂತೆ ಎಚ್ಚರ ವಹಿಸಬೇಕು ಎಂಬುದಕ್ಕೆ ಒತ್ತು ನೀಡಲಾಗಿತ್ತು.

ಹೋರಾಟದ ಉದ್ದಕ್ಕೂ ಭಿನ್ನ ರೀತಿಯಲ್ಲಿ ಅಹಿಂಸಾ ತತ್ವ ಪ್ರಭಾವ ಬೀರಿತ್ತು. 1994ರಲ್ಲಿ ಪ್ರಜಾ ಪ್ರಭುತ್ವ ಸರ್ಕಾರ ಬಂದ ನಂತರ ಕಂಡು ಬಂದ ಸಾಮ ರಸ್ಯದ ಹಿಂದೆಯೂ ಗಾಂಧಿ ಪ್ರಭಾವ ಇದ್ದೇ ಇತ್ತು. ದಕ್ಷಿಣ ಆಫ್ರಿಕಾದ ಹೋರಾಟದ ಉದ್ದಕ್ಕೂ ಗಾಂಧಿ ಪ್ರತಿ ಪಾದಿಸಿದ ಅಹಿಂಸೆಯನ್ನು ಪರೀಕ್ಷೆಗೆ ಒಳಪಡಿಸಿ, ಇನ್ನಷ್ಟು ಪರಿಣಾಮಕಾರಿ ಯಾಗಿ ಬಳಸಲಾಯಿತು ಎಂದೇ ನನ್ನ ನಂಬಿಕೆ' ಎಂಬ ರೆಡ್ಡಿ ಮಾತೇ ದಕ್ಷಿಣ ಆಫ್ರಿ ಕಾದಲ್ಲಿ ಗಾಂಧಿ ತತ್ವಗಳು ಎಷ್ಟು ಬೇರೂರಿದ್ದವು ಎಂಬುದಕ್ಕೆ ಸಾಕ್ಷಿ.... ■

(ಅಕ್ಟೋಬರ್ 04, 2013 ರ ಪ್ರಜಾವಾಣಿಯಲ್ಲಿ ಪ್ರಕಟವಾದ ರಾಮಚಂದ್ರ ಗುಹಾ ಅವರ ಲೇಖನ)



ಹಿರಿಯ ಗಾಂಧಿವಾದಿ, ಹಾಗೂ ಸರ್ವೋದಯ ಕಾರ್ಯಕರ್ತರಾದ ಸಿ.ಪಿ. ಹುಚ್ಚೇಗೌಡರ ನಿಧನಕ್ಕೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂತಾಪ ವ್ಯಕ್ತಪಡಿಸಿದೆ.

ಶ್ರೀಯುತರು ಬಿಳಿಗಿರಿರಂಗನ ಬೆಟ್ಟದಲ್ಲಿದ್ದ ಗಾಂಧಿಭವನದ ಆದಿವಾಸಿ ಕೇಂದ್ರದ ಸಲಹಾ ಸಮಿತಿ ಸದಸ್ಯರಾಗಿದ್ದರುಹಾಗೂ ಈ ಕೇಂದ್ರದ ಅಭಿವೃದ್ಧಿಗಾಗಿ ಆರ್ಥಿಕ ನೆರವನ್ನೂ ನೀಡಿದ್ದರು.

90ರ ಇಳಿವಯಸ್ಸಿನಲ್ಲೂ ಬೆಂಗಳೂರಿನಲ್ಲಿರುವ ಗಾಂಧಿ ಭವನಕ್ಕೆ ಭೇಟಿ ನೀಡಿ ಬಿಳಗಿರಿರಂಗನ ಬೆಟ್ಟದಲ್ಲಿರುವ ಗಾಂಧಿ ಭವನದ ಆಸ್ತಿಯನ್ನು ಉಳಿಸಿಕೊಂಡು ಅದನ್ನು ಅಭಿವೃದ್ಧಿಪಡಿಸಬೇಕು ಎನ್ನುವ ಆಶಯವನ್ನು ವ್ಯಕ್ತಪಡಿಸುತ್ತಿದ್ದರು.

ಗಾಂಧೀ ಸ್ಮಾರಕ ನಿಧಿ ವಜ್ರ ಮಹೋತ್ಸವ(75) ಆಚರಣೆ

ಮಹಾತ್ಮ ಗಾಂಧೀಜಿಯವರು ಜನವರಿ 30 ,1948 ರಂದು ಹಂತಕನ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಈ ಸಂದರ್ಭದಲ್ಲಿ ದೇಶದ ಪ್ರಮುಖ ನಾಯಕರುಗಳೆಲ್ಲಾ ಸೇರಿ ಮಹಾತ್ಮ ಗಾಂಧೀಜೀ ಅವರ ತತ್ವ ಸಿದ್ಧಾಂತವನ್ನು ಮುಂದಿನ ಪೀಳಿಗೆಗೆ ದಾಟಿಸುವ ಸಲುವಾಗಿ ಗಾಂಧೀ ಸ್ಮಾರಕ ನಿಧಿ ಸಂಸ್ಥೆಯನ್ನು ಸ್ಥಾಪಿಸಲು ನಿರ್ಧರಿಸಿದರು. ಈ ನಿಟ್ಟಿನಲ್ಲಿ ಅಂದಿನ ಭಾರತದ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರು ಅವರ ಮುಂದಾಳತ್ವದಲ್ಲಿ ಹಾಗೂ ರಾಷ್ಟಪತಿ ಡಾ: ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಯಿತು. ಈ ಸಮಿತಿಯ ಮೂಲಕ ರಾಷ್ಟ್ರಾದ್ಯಂತ ಮನವಿ ಮಾಡಿ ಉದ್ದಿಮೆದಾರರಿಂದ ಹಾಗೂ ಸಾರ್ವಜನಿಕರಿಂದ ದೇಣಿಗೆ ರೂಪದಲ್ಲಿ ಹಣ ಸಂಗ್ರಹಿಸಿ ಕೇಂದ್ರ ಗಾಂಧೀ ಸ್ಮಾರಕ ನಿಧಿ ಸಂಸ್ಥೆಯನ್ನು ನವದೆಹಲಿಯಲ್ಲಿ 1948 ರಲ್ಲಿ ಸ್ಥಾಪಿಸಲಾಯಿತು.

ಕೇಂದ್ರ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಆಶ್ರಯದಲ್ಲಿ ದೇಶದ ಹಲವು ಪ್ರಾಂತ್ಯಗಳಲ್ಲಿ ಗಾಂಧೀ ಸ್ಮಾರಕ ನಿಧಿ ಸಂಸ್ಥೆಗಳು ಆರಂಭವಾದವು. ಗಾಂಧೀ ಸೇವಾ ಆಶ್ರಮಗಳು, ಗಾಂಧೀ ಚಿತ್ರ ಸಂಗ್ರಹಾಲಯಗಳು, ಹಾಗೂ ಮಹಾತ್ಮ ಗಾಂಧೀಜಿ ಅವರಿಗೆ ಸಂಬಂದಿಸಿದ ಸ್ಥಳಗಳ ಅಭಿವೃದ್ಧಿ, ಗಾಂಧಿ ತತ್ವ ಪ್ರಚಾರ ಸಂಸ್ಥೆಗಳು ರಾಷ್ಟದ ಹಲವೆಡೆ ಸ್ಥಾಪಿತವಾದವು.

ಅದರಂತೆ ನಮ್ಮ ರಾಜ್ಯದಲ್ಲಿ ಕೂಡಾ ಮೈಸೂರು ರಾಜ್ಯ ಗಾಂಧೀ ಸ್ಮಾರಕ ನಿಧಿ ದಿನಾಂಕ 20-08-1963ರಲ್ಲಿ ಅಧಿಕೃತವಾಗಿ ಆರಂಭವಾಯಿತು.

ಕೇಂದ್ರ ಗಾಂಧಿ ಸ್ಮಾರಕ ನಿಧಿ ಆರಂಭವಾಗಿ 2024 ಕ್ಕೆ 75 ವರ್ಷಗಳು ತುಂಬುತ್ತಿರುವ ಸಂದರ್ಭವನ್ನು ಅರ್ಥಪೂರ್ಣವಾಗಿ ಸ್ಮರಿಸಿಕೊಳ್ಳಲು ಕೇಂದ್ರ ಗಾಂಧೀ ಸ್ಮಾರಕ ನಿಧಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ದೇಶಾದ್ಯಂತ ಇರುವ ಎಲ್ಲ ಗಾಂಧೀ ಸ್ಮಾರಕ ನಿಧಿಗಳಿಗೆ ಹಾಗೂ ಗಾಂಧೀ ಪ್ರಣೀತ ಸಂಸ್ಥೆಗಳಿಗೆ ಪತ್ರ ಬರೆದು ವಿನಂತಿ ಮಾಡಿದೆ. ಈ ಪತ್ರದ ಹಿನ್ನೆಲೆಯಲ್ಲಿ ಹಾಗೂ ದಿನಾಂಕ 15 .12 .2023 ರಂದು ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿಗಳಾದ ಸಂಜಯ್ ಸಿಂಗ್ ಅವರು ಭಾಗವಹಿಸಿದ್ದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಆಡಳಿತ ಮಂಡಳಿ ಸಭೆಯ ನಡವಳಿಯಂತೆ ಜನವರಿ 30, 2024 ರಿಂದ ಆರಂಭಿಸಿ ವರ್ಷಪೂರ್ತಿ ರಾಜ್ಯದ ವಿವಿಧ ಭಾಗಗಳಲ್ಲಿ ಸ್ಮರಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಣಯಿಸಲಾಯಿತು .

ಉದ್ದೇಶಿತ ಕಾರ್ಯಕ್ರಮಗಳು :

- ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಒಂದು ಅಂತರ ರಾಷ್ಟ್ರೀಯ ಸಮ್ಮೇಳನ.
- ರಾಜ್ಯದ ನಾಲ್ಕು ಕಂದಾಯ ವಲಯಗಳಲ್ಲಿ ಸಮಾವೇಶಗಳನ್ನು ಏರ್ಪಡಿಸಲು ತೀರ್ಮಾನಿಸಲಾಯಿತು.
- ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಹಾಗೂ ಖಾದಿ ಸಂಸ್ಥೆಗಳ ಸಹಯೋಗದಲ್ಲಿ ರಚನಾತ್ಮಕ ಕಾರ್ಯಕರ್ತರ ಸಮಾವೇಶ ಹಾಗೂ ಒಂದು ದಿನದ ಖಾದಿ ಪ್ರದರ್ಶನ ಹಾಗೂ ಮಾರಾಟ.
- ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ರಾ. ಸೇ ಯೋ ಸಹಯೋಗದಲ್ಲಿ ಮಹಾತ್ಮ ಗಾಂಧೀ ಪ್ರಣೀತ ಕಾರ್ಯಕ್ರಮಗಳು
- ಗಾಂಧೀ ಸ್ಮಾರಕ ನಿಧಿಯ ಪ್ರಥಮ ಸಂಚಾಲಕರಾದ ಹಾಗೂ ಮಾಜಿ ಸಚಿವೆ ಯಶೋಧರಮ್ಮ ದಾಸಪ್ಪ ಸಂಸ್ಮರಣಾ ಕಾರ್ಯಕ್ರಮ(ಮೈಸೂರು ಅಥವಾ ಅರಸೀಕೆರೆ)
- ರಾಜ್ಯ ಸರ್ಕಾರದ ಸಹಕಾರದೊಂದಿಗೆ ಗಾಂಧೀ ಪ್ರಣೀತ ಸಂಸ್ಥೆಗಳ ಅಂತರರಾಷ್ಟ್ರೀಯ ಸಮಾವೇಶ
- ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹೆಜ್ಜೆ ಗುರುತು ಸ್ಮರಣ ಸಂಚಿಕೆ ಲೋಕಾರ್ಪಣೆ
- ಗಾಂಧೀ ಭವನದಲ್ಲಿ ಗಾಂಧಿ ಕುರಿತ ಮ್ಯೂಜಿಯಂ ಸ್ಥಾಪನೆ
- ಅಕ್ಟೋಬರ್ 2 , 2025 ರಂದು ಸಮಾರೋಪ ಸಮಾರಂಭ.

ವಿಶ್ವವ್ಯಾಪಿ ಬಾಪೂ..



ನಟ್ಟ ನಡು ರಾತ್ರಿಯಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟು ಹೊರಡಲು ಕಾರಣೀಭೂತರಾದ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿ ನೇತಾರ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯ ಅವರ ಪ್ರತಿಮೆಯನ್ನು ಅದೇ ಬ್ರಿಟಿಷರು (ಲಂಡನ್ ಪಾರ್ಲಿಮೆಂಟ್ ಚೌಕದಲ್ಲಿ) ತಮ್ಮ ನೆಲದಲ್ಲಿ ಪ್ರತಿಷ್ಠಾಪಿಸಿ ಕೊಂಡಿದ್ದಾರೆ.

2015 ನೇ ಇಸ್ವಿ ಮಾರ್ಚ್ 14ರಂದು ಅಂದಿನ ಕೇಂದ್ರ ಮಂತ್ರಿಗಳಾದ ಅರುಣ್ ಜೆಟ್ಲಿ ಅವರು ಬಾಪೂಜಿಯ ಪ್ರತಿಮೆಯನ್ನು ಲೋಕಾರ್ಪಣೆ ಮಾಡಿದರು. ಬ್ರಿಟನ್ ಪ್ರಧಾನಿ ಡೆವಿಡ್ ಕ್ಯಾಮೆರೂನ್, ಬಾಪೂ ಮೊಮ್ಮಗ ಗೋಪಾಲಕೃಷ್ಣ ಗಾಂಧಿ, ಹಿಂದಿ ಚಿತ್ರರಂಗದ ಮೇರು ನಟ ಅಮಿತಾಬ್ ಬಚ್ಚನ್ ಈ ಸಂದರ್ಭದಲ್ಲಿ ಹಾಜರಿದ್ದರು .

ಸುಮಾರು 9 ಅಡಿ ಎತ್ತರವಿರುವ ಬಾಪೂಜಿಯ ಕಂಚಿನ ಪ್ರತಿಮೆಯ ಶಿಲ್ಪಿ ಫಿಲಿಪ್ ಜಾಕ್ಸನ್.

ಸೌತ್ ಆಫ್ರಿಕೆಯ 21 ವರ್ಷಗಳ ಸಂಘರ್ಷದ ಬದುಕನ್ನು ಮುಗಿಸಿಕೊಂಡು ಸತ್ಯಾಗ್ರಹಿ ಗಾಂಧಿ ಭಾರತಕ್ಕೆ ಬಂದ ಸವಿನೆನಪಿಗಾಗಿ (1915–2015) ಈ ಪ್ರತಿಮೆಯನ್ನು ನಿರ್ಮಿಸಲಾಗಿದೆ.

ಪ್ರತಿಷ್ಠಿತ ಈ ಪಾರ್ಲಿಮೆಂಟ್ ಸ್ಕ್ವೆಯರ್ ನಲ್ಲಿ ಒಟ್ಟು 11 ಪ್ರತಿಮೆಗಳಿದ್ದು ಆ ಎಲ್ಲ ನಾಯಕರು ಆಯಾ ದೇಶದ ಬೇರೆ ಬೇರೆ ಹುದ್ದೆಯಲ್ಲಿದ್ದವರು ಮತ್ತು ಅಧಿಕಾರವನ್ನು ಅನುಭವಿಸಿದವರು,

ಆದರೆ ಯಾವುದೇ ಹುದ್ದೆಯನ್ನು ಅಲಂಕರಿಸದ, ಯಾವುದೇ ಅಧಿಕಾರವನ್ನು ಅನುಭವಿಸದ ರಾಜಕೀಯೇತರ ವ್ಯಕ್ತಿ ಎಂದರೆ ಅದು ನಮ್ಮ ಬಾಪೂಜಿ ಮಾತ್ರ. ಜೀವಮಾನದಲ್ಲಿ ಗಾಂಧಿಯನ್ನು ಎಂದೂ ಪ್ರೀತಿಸದ ಕೊನೆಯ ವರೆಗೂ ವಿರೋಧಿಸಿ, ಸ್ವಾತಂತ್ರ್ಯ ಕೇಳಲು ಬಂದ ಭಾರತೀಯ ಬೆಗ್ಗರ್ ಎಂದು ಅವಮಾನಿಸಿ, ಅರೆಬೆತ್ತಲೆ ಫಕೀರ ಎಂದು ಮೂದಲಿಸಿದ ಬ್ರಿಟನ್ ಪ್ರಧಾನಿ ವಿನ್ಸಿನ್ ಚರ್ಚಿಲ್ ಪ್ರತಿಮೆ ಹಾಗೂ ಸೌತ್ ಆಫ್ರಿಕೆಯಲ್ಲಿ ಗಾಂಧಿ ಹೋರಾಟದಲ್ಲಿದಾಗ,

ಎದೆಗೆ ಒದ್ದು ಜೈಲಿಗೆ ಹಾಕಿ, ಕೊಡಬಾರದ ಹಿಂಸೆ ಕೊಟ್ಟ ವಿಕೃತ ಮನಸಿನ ಸರ್ವಾಧಿಕಾರಿ ಧೋರಣೆಯ ಮಿಲ್ಟ್ರಿ ಅಧಿಕಾರಿ ಜನರಲ್ ಸ್ಮಟ್ಸ್ ಈ ಇಬ್ಬರೂ ಗಾಂಧೀಜಿಯವರ ರಾಜಕೀಯ ವೈರಿಗಳ ಪ್ರತಿಮೆ ನಡುವೆ ನಮ್ಮ ಗಾಂಧೀಜಿಯವರ ಪ್ರತಿಮೆಯನ್ನು ನಿಲ್ಲಿಸಿದ್ದು ಇಲ್ಲಿಯ ವಿಶೇಷವಾಗಿದೆ.

ಸಂಗ್ರಹ : ನೇತಾಜಿ ಗಾಂಧಿ

ಚಿ|ತ್ರಾ|ವ|ಳಿ



ಗಾಂಧಿ ಸ್ಮಾರಕ ನಿಧಿ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಸಂಯುಕ್ತ ಆಶ್ರಯದಲ್ಲಿ ನಡೆದ ಯುವ ಪ್ರೇರಣಾ ಶಿಬಿರದ ಸ್ವಯಂ ಸೇವಕರು ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ನಡೆದ ಗಣ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು .



ಹೆಸರಾಂತ ಇತಿಹಾಸಕಾರ ಶ್ರೀ ರಾಮಚಂದ್ರ ಗುಹ ಅವರು ' ಬಾಪೂ ಕೆ ಲೋಗ್ 'ಕಾರ್ಯಕ್ರಮ ನಿಮಿತ್ತ ಗಾಂಧಿ ಭವನಕ್ಕೆ ಆಗಮಿಸಿದ ಸಂದರ್ಭ. ಲೋಕಸಭಾ ಸದಸ್ಯ ಶ್ರೀ ಅನಿಲ್ ಹೆಗಡೆ , ಆರ್ಥಿಕ ತಜ್ಞ ವಿನೋದ್ ವ್ಯಾಸುಲು , ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಎಂ ಸಿ ನರೇಂದ್ರ ಹಾಗೂ ಸದಸ್ಯರಾದ ಪ್ರೊ . ಜಿ ಬಿ ಶಿವರಾಜು ಜೊತೆಗಿದ್ದಾರೆ.



ಆಲಮಟ್ಟಿಯ ಹರ್ಡೇಕರ ಮಂಜಪ್ಪ ಕಾಲೇಜಿನಲ್ಲಿ ನಡೆಸಿದ ಸರ್ವೋದಯ ದಿನಾಚರಣೆಯಲ್ಲಿ ಗಾಂಧಿ ವಿಚಾರ ವೇದಿಕೆಯ ಉತ್ತರ ಕರ್ನಾಟಕದ ಸಂಯೋಜಕ ಶ್ರೀ ನೇತಾಜಿ– ಗಾಂಧಿ ಭಾಗವಹಿಸಿದರು



ಗಾಂಧೀಜಿ ಮೌಲ್ಯಗಳನ್ನು ಕುರಿತಂತೆ ಒಂದು ದಿನದ ಶಿಬಿರವನ್ನು ಕನಕಪುರದ ಗಾಂಧಿವಾದಿ ಎಸ್. ಕರಿಯಪ್ಪನವರ ರೂರಲ್ ಕಾಲೇಜಿನಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಎನ್ ಎಸ್ ಎಸ್ ಸಹಯೋಗದಲ್ಲಿ ಸಂಯೋಜಿಸಿತ್ತು.



ಬೆಂಗಳೂರು ಮಲ್ಲೇಶ್ವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಸಹಯೋಗದೊಂದಿಗೆ ಮಹಾತ್ಮ ಗಾಂಧೀಜಿಯವರ ಚಿಂತನೆ–ಆದರ್ಶ – ಜೀವನಮೌಲ್ಯಗಳನ್ನುಕುರಿತ ವಿಶೇಷ ಉಪನ್ಯಾಸ ಪುಸ್ತಕ ಪ್ರದರ್ಶನ ಎನ್.ಎಸ್.ಎಸ್.ವಿದ್ಯಾರ್ಥಿಗಳಿಂದ ಶ್ರಮದಾನ ಏರ್ಪಡಿಸಲಾಗಿತ್ತು.ಪ್ರಾಂಶುಪಾಲರಾದ ಡಾ. ಡಿ.ಎಸ್.ಪ್ರತಿಮ ಅಧ್ಯಕ್ಷತೆ ವಹಿಸಿದ್ದರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಶೇಷಾದ್ರಿಪುರಂ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಒಂದು ದಿನದ ಎನ್ ಎಸ್ ಎಸ್ ಶಿಬಿರ ಸಂಘಟಿಸಲಾಗಿತ್ತು .




ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಕೋಶಾಧ್ಯಕ್ಷರಾದ ಹೆಚ್ ಬಿ ದಿನೇಶ್ ಅವರಿಂದ ಗಾಂಧೀ ಭವನದಲ್ಲಿ ಭಾರತದ 75ನೇ ಗಣರಾಜೋತ್ಸವದ ಅಂಗವಾಗಿ ದಿನಾಂಕ 26/01/2024 ರಂದು ರಾಷ್ಟ್ರಧ್ವಜಾರೋಹಣ




ದಾವಣಗೆರೆಯ ಗಾಂಧಿಭವನದಲ್ಲಿ ಹುತಾತ್ಮರ ದಿನಾಚರಣೆ . ಗಾಂಧಿವಾದಿ ರುದ್ರಮುನಿ ಹಾಗು ಗಾಂಧಿ ಬಳಗದ ಸದಸ್ಯರು ಹಾಜರಿದ್ದರು .



ಆನಂದರಾವ್ ವೃತ್ತದಿಂದ ಸೌಹಾರ್ದ ಯಾತ್ರೆಗೆ ಚಾಲನೆ



ಸರ್ವೋದಯ ದಿನಾಚರಣೆಯ ವೇದಿಕೆ ಕಾರ್ಯಕ್ರಮ ..



ಮುಖ್ಯ ಅತಿಥಿಗಳಾಗಿ ದೀನಬಂಧು ಸಂಸ್ಥೆಯ ಜಿ ಎಸ್ ಜಯದೇವ್, ಕಥಾ ನಿರೂಪಣಾ ಪರಿಣಿತ ವಿಕ್ರಮ್ ಶ್ರೀಧರ್ ಮತ್ತು ಶಿಕ್ಷಣ ತಜ್ಞ ಎಚ್ ಎನ್ ಮುರಳೀಧರ್ ಮತ್ತು ಹಿರಿಯ ಚಿಂತಕ ಸುಧೀಂದ್ರ ಕುಲಕರ್ಣಿ ಭಾಗವಹಿಸಿದ್ದರು. ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ ಕೃಷ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.




ಅರಸೀಕೆರೆಯ ಕಸ್ತೂರ್ ಬಾ ಆಶ್ರಮದಲ್ಲಿ ಸರ್ವೋದಯ ದಿನಾಚರಣೆ .ವಿದ್ಯಾರ್ಥಿಗಳೊಡನೆ ಕಾರ್ಯಕಾರಿ ಸಮಿತಿಯ ಸದಸ್ಯರಾದ ಅನಂತಕುಮಾರ್ .

ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001

Printed at : **Printastic,** 272, 2nd Main Road, 6th Cross, Lavakushanagar, Laggere Bangalore-58